ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಲ್ಯಾಣ ಕಿರಣ

ಜುಲೈ 2016

ಶರಣರ ನಡೆ ಮುಕ್ತಿಯ ಕಡೆ









ಕಲ್ಯಾಣ ಕಿರಣ ತಿಂಗಳ ನೋಟ

1.ಬೆಂಗಳೂರು ಬಸವಗಂಗೋತ್ರಿಯಲ್ಲಿ ಆಯೋಜಿಸಿದ್ದ ಬಸವೋತ್ಸವಕ್ಕೆ ಪೂಜ್ಯಶ್ರೀ ಮಾತಾಜಿಯವರು ಚಾಲನೆ ನೀಡಿದರು.

2. ಬೆಂಗಳೂರು ಬಸವಮಂಟಪದಲ್ಲಿ ಪೂಜ್ಯಶ್ರೀ ಮಾತಾಜಿಯವರು ನೂತನ ಸಚಿವ ಈಶ್ವರಖಂಡ್ರೆ ಅವರನ್ನು ಸನ್ಮಾನಿಸಿದರು.

3.ಗೋಕಾಕ್ ಬಸವ ಮಂಟಪದಲ್ಲಿ ಸಂಪುಟ ದರ್ಜೆಯ ಸಚಿವರಾದ ಮಾನ್ಯ ಶ್ರೀ ರಮೇಶ್ ಜಾರಕಿಹೊಳಿ ಇವರನ್ನು ರಾಷ್ಟ್ರೀಯ ಬಸವ ದಳ ಅಧ್ಯಕ್ಷ ಶರಣ. ಉದಯ್ ಕರ್ಜಗಿಮಠ ಸನ್ಮಾನಿಸಿದರು.

ಶರಣು ಶರಣಾರ್ಥಿ

ಭಕ್ತರ ಕಂಡಡೆ ಬೋಳಪ್ಪಿರಯ್ಯಾ
ಸವಣರ ಕಂಡರೆ ಬತ್ತಲೆಯಪ್ಪಿರಯ್ಯಾ
ಹಾರುವರ ಕಂಡರೆ ಹರಿನಾಮವೆಂಬಿರಯ್ಯಾ.
ಅವರವರ ಕಂಡರೆ ಅವರರವರಂತೆ
ಸೂಳೆಗೆ ಹುಟ್ಟಿದವರ ಎನಗೆ ತೋರದಿರಯ್ಯಾ
ಲಿಂಗದೇವರ ಪೂಜಿಸಿ, ಅನ್ಯ ದೈವಂಗಳಗೆರಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ
ನಾನೇನೆಂಬೆನಯ್ಯಾ?.

– ವಿಶ್ವಗುರು ಬಸವಣ್ಣನವರು

ಆಗಸ್ಟ್

ಹಬ್ಬ, ಹುಣ್ಣಿಮೆಗಳು

ಆಗಸ್ಟ್–3 : ಬಸವಜ್ಯೋತಿ ಆರಂಭ
ಆಗಸ್ಟ್–7 : ವಿಶ್ವಗುರು ಬಸವಣ್ಣನವರ 82ನೇ ಲಿಂಗೈಕ್ಯ ಸಂಸ್ಮರಣೆ
ಆಗಸ್ಟ್–8 : ನೀಲಾಂಬಿಕಾ ಷಷ್ಠಿ

ಸಂಪಾದಕೀಯ
ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿ,
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ,
ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ,
ಅಕ್ಷರ ಜೋಡಣೆ
ಬಸವ ಚಂದ್ರಿಕಾ
ಪುಟ ವಿನ್ಯಾಸ
ಪುನೀತ್.ಎಂ.ಜಿ.
ಪ್ರಸಾರ ಮೇಲ್ವಿಚಾರಣೆ
ಆರ್.ಎಸ್.ಹೊನ್ನಪ್ಪನವರ್

ಒಂದು ಪ್ರತಿಗೆ: 20 ರೂಪಾಯಿ
ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ – 47 ಬಸವ ಶಕೆ 882
ಸಂಚಿಕೆ – 07 ಜುಲೈ 2016



Kalyana Kirana-R.No.19988/70. Monthly Magzine Edited and published by Pujya kasthuridevi on behalf of Vishva Kalyana Mission chratible trust, Basava Mantapa, 2035, 20th main, 2nd block, Rajajinagar Bangalore -560010.
Ph: 080-23131476. SMS-9945806297.
E-mail: kalyanakirana1970@gmail.com

ಸಂಪಾದಕರ ನುಡಿ

✍ ಮಾತಾಜಿ

12 ನೇ ಶತಮಾನದ ಪ್ರಧಾನಿಗಳು 21



ಕರ್ತನೆಂಬ ಕಲಾವಿದ ಮನುಕುಲ ಇತಿಹಾಸವೆಂಬ ಭಿತ್ತಿಯ ಮೇಲೆ ತನ್ನ ಕಾರುಣ್ಯ ಕುಂಚದಿಂದ ಬಿಡಿಸಿದ ಅಪ್ರತಿಮ ಚಿತ್ರ ವಿಶ್ವಗುರು ಬಸವಣ್ಣನವರು. ಸರ್ವಗುಣ ಸಂಪನ್ನರಾದ, ಸಕಲ ಜನ ವಂದ್ಯರಾದ, ದಯೆ, ಮಾನವೀಯತೆಯ, ಧೀಮಂತಿಕೆಯ ತ್ರಿಕೂಟವಾದ ಬಸವಣ್ಣನವರು ಪರವಸ್ತುವಿನ ಚಿತ್ಕಳೆಯಾಗಿ, ಶರಣರ ಮನೋಮಧ್ಯದ ಸ್ವಯಂಜ್ಯೋತಿಯಾಗಿ ಬಾಳಿ ಬೆಳಗಿದರು.

ಕರ್ನಾಟಕದ ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ 1134 ರಲ್ಲಿ ಕಮ್ಮೆಕುಲದ ಶೈವ ಬ್ರಾಹ್ಮಣ ದಂಪತಿಗಳಾದ ಮಾದರಸ ಮತ್ತು ಮಾದಲಾಂಬಿಕೆ ಗರ್ಭದಲ್ಲಿ ಆನಂದನಾಮ ಸಂವತ್ಸರದ ಕ್ರಿ.ಶ.1134 ವೈಶಾಖ ಮಾಸದ ಅಕ್ಷಯ ತೃತೀಯದಂದು ವಿಶ್ವಗುರು ಬಸವಣ್ಣನವರು ಜನಿಸಿದರು. ಸಂಪ್ರದಾಯದ ವಿರುದ್ಧ ಪ್ರತಿಭಟಿಸಿ ಎಂಟನೇ ವಯಸ್ಸಿನಲ್ಲಿ ಜನಿವಾರ ಧರಿಸಿ ದ್ವಿಜ ಸಂಸ್ಕಾರ ಪಡೆಯಲು ತಂದೆ-ತಾಯಿ, ಶಾಸ್ತ್ರಿಗಳು ಅಗ್ರಹಿಸಿದಾಗ ತನ್ನ ಅಕ್ಕನಿಗೆ ಮೊದಲು ಕೊಡಿರಿ ಅಂದಾಗ ಹೆಣ್ಣು ಮಕ್ಕಳು ಶೂದ್ರರು, ಧರ್ಮ ಸಂಸ್ಕಾರಕ್ಕೆ ಅನರ್ಹರು ಎಂದಾಗ, ಬಾಲ ಬಸವರಸರು ತಂದೆಗೆ ನೀನು ಎಲ್ಲಿ ಹುಟ್ಟಿದ್ದಿಯಾ? ನಾನು ಎಲ್ಲಿಂದ ಹುಟ್ಟಿದ್ದೇನೆ? ಹಾಗೂ ಜಗತ್ತಿನ ಮಾನವರೆಲ್ಲ ಎಲ್ಲಿಂದ ಜನಿಸಿದ್ದಾರೆ? ಅಂತಾ ಪ್ರಶ್ನಿಸಿ ತಾಯಿಯಿಂದಲ್ಲವೇ? ಮಹಿಳೆಯರಿಗೆ ಸಾಮಾಜಿಕ-ಧಾರ್ಮಿಕ ಹಕ್ಕನ್ನು ಕೊಡಿಸುವ ಸಲುವಾಗಿ ಮನೆಯನ್ನು ತೊರೆದು ಕೂಡಲ ಸಂಗಮದ ಶೈವ ಗುರು ಕುಲಕ್ಕೆ ಬಂದು ಜಾತವೇದ ಮುನಿಗಳ ಆಶ್ರಯ ಪಡೆದರು. 21 ವರ್ಷಗಳವರೆಗೆ ವೇದ, ಶಾಸ್ತ್ರ, ಅಗಮ, ಪುರಾಣ, ಯೋಗ ಎಲ್ಲವನ್ನು ಅಧ್ಯಯಿನಿಸಿ ಅನುಷ್ಠಾನಿಸಿ ನಿರಾಕಾರ ದೇವನನ್ನು ಅದೇ ಪರಿಕಲ್ಪನೆಯ ಬೆಂಬಳಿವಿಡಿದು ವೈಜ್ಞಾನಿಕ, ವೈಚಾರಿಕ, ಧಾರ್ಮಿಕ, ಆಧ್ಯಾತ್ಮಿಕ ತಳಹದಿಯ ಮೇಲೆ ಕಾಂತಿಯುಕ್ತವಾದ ಚಿತ್ಕಳಾಭರಿತವಾದ ಆತ್ಮ-ಪರಮಾತ್ಮನ ಸಂಕೇತಿಸುವ ಸಾಕಾರ ಇಷ್ಟಲಿಂಗವನ್ನು ಸಂಶೋಧಿಸಿ ಕೊಟ್ಟರು.

ತಾವು ಮೊದಲು ಧರಿಸುವುದರೊಂದಿಗೆ ಎಲ್ಲ ಹಕ್ಕುಗಳಿಂದ ವಂಚಿತರಾಗಿದ್ದ ಸ್ತ್ರೀ ಕುಲದ ಪ್ರತಿ ನಿಧಿಯಾಗಿ ಮೊದಲು ಅಕ್ಕನಾಗಮ್ಮನಿಗೆ ಇಷ್ಟ ಲಿಂಗ ದೀಕ್ಷೆಯನ್ನು ನೀಡಿದರು. ಇದರಿಂದಾಗಿ ಎಲ್ಲರಿಗೂ ಇಷ್ಟಲಿಂಗವನ್ನು ದೀಕ್ಷೆಯ ಮುಖಾಂತರ ಬಿಜ್ಜಳರಾಜನ ಮಂತ್ರಿಯಾದ, ತಾಯಿಯ ಅಣ್ಣನಾದ ಬಲದೇವರಸರ ಏಕೈಕ ಪುತ್ರಿ ನೀಲಗಂಗಾಂಬಿಕೆಯನ್ನು ವಿವಾಹವಾಗಿ ದಾಂಪತ್ಯ ನಡೆಸಿದರು. ಕರಣಿಕ ಕಾಯಕದೊಂದಿಗೆ ಪ್ರಾರಂಭವಾದ ಇವರು ಹಂತ ಹಂತವಾಗಿ ಮೇಲೇರಿ ಬಂಗಾರದ ತಗಡಿನಲ್ಲಿ ಪೂರ್ವ ಲಿಖಿತದ ಪತ್ರವನ್ನೋದಿ ಸಿಂಹಾಸನದ ಅಡಿಯಲ್ಲಿದ್ದ 60 ಕೋಟಿ ಹೊನ್ನನ್ನು ತೆಗೆಯಿಸಿಕೊಟ್ಟು ಪ್ರಜಾಹಿತಕ್ಕೆ ಬಳಸಿದರು. ಇದರಿಂದಾಗಿ ಪ್ರಧಾನಿಯಾಗಿ ಕಾಯಕದ ಹಾಲಿನ ಹೊಳೆಯಲ್ಲಿ ದಾಸೋಹದ ತೆಪ್ಪ ತೇಲುವಂತಹ



ಕಲ್ಯಾಣ ರಾಜ್ಯವನ್ನು ಸ್ಥಾಪಿಸಿದರು. ಜಗತ್ತಿನ ಮೊಟ್ಟ ಮೊದಲ (ಪಾರ್ಲಿಮೆಂಟ್) ಸಂಸತ್ ಎಂದೆನಿಸಿಕೊಂಡ ಅನುಭವ ಮಂಟಪವನ್ನು ಸ್ಥಾಪಿಸಿದರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಅಫಘಾನಿಸ್ಥಾನದಿಂದ ಬಂಗಾಳದವರೆಗೆ ಸತ್ಯದ ಸಾಧಕರು, ಶೋಧಕರು, ಜಾತಿ, ಮತ, ಪಂಥ, ಭಾಷೆ, ಸ್ತ್ರೀ-ಪುರುಷ ರೆಂಬ ಭೇದವಿಲ್ಲದೆ, ವಿವಿಧ ಕಾಯಕದ ಜನ ಸಮುದಾಯದವರು ಬಂದು ಕಲ್ಯಾಣದಲ್ಲಿ ನೆಲೆನಿಂತರು.

ವಿಚಾರ ಸ್ವಾತಂತ್ರ್ಯ, ಆಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯವನ್ನು ಸರ್ವರಿಗೂ ನೀಡಿ ಭೌತಿಕ ಮೌಲ್ಯ, ನೈತಿಕ ಮೌಲ್ಯ, ಆಧ್ಯಾತ್ಮಿಕ ಮೌಲ್ಯ ಬೋಧಿಸಿದರು. ಇದರಿಂದಾಗಿ ಭಿಕ್ಷುಕರಿಲ್ಲದ, ಭ್ರಷ್ಟಾಚಾರವಿಲ್ಲದ ಸಮಾಜವನ್ನು "ಕಲ್ಯಾಣದಲ್ಲಿ ನೀಡುವವರುಂಟು, ಬೇಡುವವರಿಲ್ಲದ ಕಾರಣ ನಾನು ಬಡವಾದೆನೆಂದು ಗುರು ಬಸವಣ್ಣನವರು ಸಮೃದ್ಧಿ, ಸಂತೃಪ್ತಿ ಸುಯಿಧಾನಗಳಿಂದ ಕೂಡಿದ ಸುಖದ ಶಾಂತಿಯ ಸಮಾಧಾನದ ನೆಲೆಯನ್ನಾಗಿ ಈ ಭುವಿಯನ್ನು ಪಾವನಗೊಳಿಸಿದರು.

ಇದೇ ಹಾದಿಯಲ್ಲಿ ಈಗಿನ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಯವರು ಸಾಗುತ್ತಿದ್ದಾರೆ, ಕೆಳವರ್ಗದ, ಬಡತನದ ಮನೆತನದಲ್ಲಿ ಜನಿಸಿದ ಇವರ ಕಾಯಕ, ಚಹಾ ಮಾರುವುದು, ಪ್ರಾಮಾಣಿಕವಾಗಿ ನಿಷ್ಠೆಯಿಂದ ಕಾಯಕ ಮಾಡುತ್ತ ವಿದ್ಯೆಯನ್ನೂ ಸಂಪಾದಿಸುತ್ತಾ ಭಾಜಪದಲ್ಲಿ ಸಕ್ರೀಯ ಕಾರ್ಯಕರ್ತರಾಗಿ ಮೇಲೇರುತ್ತಾ ಗುಜರಾತ್ ರಾಜ್ಯದ ಮುಖ್ಯ ಮಂತ್ರಿಯಯಾಗಿ 12 ವರ್ಷಗಳವರೆಗೆ ದುಡಿದು ಸೇವೆ ಸಲ್ಲಿಸಿ ಮಾದರಿ ರಾಜ್ಯವನ್ನಾಗಿ ರೂಪಿಸಿದರು.

ನಿಸ್ವಾರ್ಥ ಸೇವೆ, ಸಾಮಾಜಿಕ ಕಳಕಳಿ, ದೇಶಾಭಿಮಾನದಿಂದ ಭಾಜಪವು ಕೇಂದ್ರದಲ್ಲಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದುದು ಮಾನ್ಯ ಶ್ರೀ ನರೇಂದ್ರ ಮೋದಿಯವರಿಂದ. ಇವರನ್ನು ಪ್ರಧಾನಿ ಹುದ್ದೆಗೆ ಆಯ್ಕೆ ಮಾಡಿ ಹೆಸರು ಸೂಚಿಸಿದ್ದರಿಂದಲೇ ಯಶಸ್ವಿಯಾದರು.

ಇವರು ಪ್ರಧಾನಿ ಹುದ್ದೆ ಚುಕ್ಕಾಣಿ ಹಿಡಿದಾಗಿನಿಂದ 16-18 ತಾಸುಗಳ ವರೆಗೆ ಕಾಯಕ ಮಾಡುತ್ತಾ ಸಂಪುಟ ಸಹೋದ್ಯೋಗಿಗಳನ್ನು ಇವರ ಓಟಕ್ಕೆ ಓಡಿಸುತ್ತಾ ಜಗತ್ತಿನ ನೂರಾರು ದೇಶಗಳನ್ನು ಸಂದರ್ಶಿಸಿ ಪ್ರೀತಿ, ವಿಶ್ವಾಸ, ಬಾಂಧವ್ಯ, ವ್ಯಾಪಾರ, ಉದ್ಯೋಗ ಕೊಡು-ತೆಗೆದುಕೊಳ್ಳುವ ವ್ಯವಹಾರ ವೃದ್ಧಿಸಿದ್ದಾರೆ. ಭಯೋತ್ಪಾದನೆ ನಿಗ್ರಹಕ್ಕೆ ಪೂರಕವಾದ ವಾತಾರವಣ ನಿರ್ಮಿಸಲು ಹೊರದೇಶಗಳ ಸಹಕಾರದ ಬಗ್ಗೆ ಒಡಂಬಡಿಕೆ ಮಾಡಿಕೊಂಡಿದ್ದಾರೆ.

ಆರ್ಥಿಕ ಅಭಿವೃದ್ಧಿಗೆ ಬೇಕಾಗುವ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಅವಶ್ಯಕತೆ ಇಲ್ಲದೆ ಹಲವಾರು ಕಾಯ್ದೆ ಕಾನೂನುಗಳನ್ನು ಹಿಂಪಡೆದು ಭ್ರಷ್ಟಾಚಾರ ನಿಗ್ರಹಕ್ಕೆ ಪೂರಕವಾದ ಯೋಜನೆಗಳನ್ನು ರೂಪಿಸಿದ್ದಾರೆ. ಜನ್‌ಧನ್, ವಿಮಾ, ಆರೋಗ್ಯಕ್ಕೆ ಸಂಬಂಧಪಟ್ಟ ಬಡವರಿಗೆ ಅನುಕೂಲವಾಗುವ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಭಾರತ ಮಾತೆಯ ಸಂಸ್ಕೃತಿ ಸಾಮರಸ್ಯವನ್ನು ಜಗತ್ತಿನಾದ್ಯಂತ ಕೀರ್ತಿ ಪತಾಕೆಯನ್ನು ಹಾರಿಸುತ್ತಿದ್ದಾರೆ. ಸ್ವಚ್ಛಭಾರತ ಅಭಿಯಾನ, ವಿಶ್ವಯೋಗ ದಿನವನ್ನು ಆಚರಿಸುವುದರೊಂದಿಗೆ ನೂರಕ್ಕೂ ಹೆಚ್ಚು ದೇಶಗಳು ಇದರಲ್ಲಿ ಸಹಭಾಗಿಗಳಾಗುವಂತೆ ಪ್ರೇರೇಪಿಸಿದ್ದಾರೆ.

ಗುಲಬರ್ಗಾದ ಶರಣ ನೀರಜ್ ಪಾಟೀಲ ಮಾಜಿ ಮೇಯರ್ ಲಂಡನ್ ಇವರು ತುಂಬಾ ಪರಿಶ್ರಮದಿಂದ ಥೇಮ್ಸ್ ನದಿ ದಂಡೆ, ಸಂಸತ್ ಭವನದ ಎದುರು ವಿಶ್ವಗುರು ಬಸವೇಶ್ವರರ ಕಂಚಿನ ಪುತ್ಥಳಿಯನ್ನು ಮಾನ್ಯ ಶ್ರೀ ಪ್ರಧಾನಿ ನರೇಂದ್ರ ಮೋದಿಯವರಿಂದ ಅನಾವರಣಗೊಳಿಸಿ ಜಗತ್ತಿಗೆ ಶ್ರೀ ಗುರು ಬಸವಣ್ಣನವರ ಹಾಗೂ ಎಲ್ಲರಿಗೆ ಬೇಕಾಗುವ ತತ್ವ ಸಿದ್ಧಾಂತಗಳ ಸಾರವನ್ನು ಸಾರಿಸಾರಿ ಹೇಳಿ 12ನೇ ಶತಮಾನವನ್ನು ನೆನಪಿಸಿದ್ದಾರೆ.

ಅಕ್ಕನ ಅಮರವಾಣಿ ಭಾಗ-31



335. ಚನ್ನಬಸವಣ್ಣನಿಗೆ ನಮೋ

ಚರಾಚರಾತ್ಮಕ ಪ್ರಪಂಚವೆಲ್ಲ
ಶಿವನ ಚಿದ್ಗರ್ಭದಿಂದುದಯಿಸಿಪ್ಪವೆಂದು,
ಶಿವಾಭಿನ್ನತ್ವದಿಂ ಸಕಲಪ್ರಾಣಿಗಳಲ್ಲಿ
ತನ್ನಾತ್ಮಚೇತನವ ತನ್ನಲ್ಲಿ ಸಕಲ ಪ್ರಾಣಿಗಳ
ಆತ್ಮಚೇತನವ ಕಂಡು, ದಯಾಪರತತ್ವವನುಳ್ಳ
ಸರ್ವಜ್ಞತಾ ಶಕ್ತಿಯನು
ಭಕ್ತಿಸ್ಥಲದಲ್ಲಿ ಪಡೆವುದು ನೋಡಾ.
ತನಗೆ ಬಂದ ಅಪವಾದ ನಿಂದೆ
ಎಡರಾಪತ್ತುಗಳಲ್ಲಿ ಎದೆಗುಂದದೆ
ಬಪ್ಪ ಸುಖ ದುಃಖ ಖೇದ ಹರ್ಷಾದಿಗಳು
ಶಿವನಾಜ್ಞೆಯಹುದೆಂದು ಪರಿಣಿತನಪ್ಪ
ತೃಪ್ತಿಯ ಶಕ್ತಿಯನು ಮಾಹೇಶ್ವರಸ್ಥಲದಲ್ಲಿ
ಪಡೆವುದು ನೋಡಾ. ದೇಹಾದಿ
ಪ್ರಪಂಚಕ್ಕೆ ಮೂಲಿಗನಾದ
ಅನಾದಿ ಪರಶಿವನ ಪ್ರಸನ್ನತ್ವವನುಂಟು
ಮಾಡುವ ಅನಾದಿ ಬೋಧ ಶಕ್ತಿಯನು
ಪ್ರಸಾದಿಸ್ಥಲದಲ್ಲಿ ಪಡೆವುದು ನೋಡಾ.
ಅಂತಪ್ಪ ದೇಹಾದಿ ಪ್ರಪಂಚದ
ಚಲನವಲನವು
ತನ್ನಾಶ್ರಯದಲ್ಲಿ ನಡೆದು ತಾನು
ಆವುದನ್ನೂ ಆಶ್ರಯಿಸದೆ ಸರ್ವಸ್ವತಂತ್ರ
ತಾನೆಂಬರಿವನುಂಟುಮಾಡುವ
ಸ್ವತಂತ್ರ ಶಕ್ತಿಯನು ಪ್ರಾಣಲಿಂಗಿಸ್ಥಲದಲ್ಲಿ
ಪಡೆವುದು ನೋಡಾ.
ತನ್ನಾಶ್ರಯವ ಪಡೆದ ದೃಶ್ಯಮಾನ
ದೇಹಾದಿ ಜಗವೆಲ್ಲ ಅನಿತ್ಯವೆಂಬ ಆ ದೃಶ್ಯ
ಮಾನದೇಹಾದಿಗಳ ಮೂಲೋತ್ಪತ್ತಿಗಳಿಗೆ
ಕಾರಣನಪ್ಪ ಪತಿ ಪರಶಿವಲಿಂಗವೇ
ನಿತ್ಯವೆಂಬರಿವನುಂಟುಮಾಡುವ
ಅಲುಪ್ತ ಶಕ್ತಿಯನು ಶರಣಸ್ಥಲದಲ್ಲಿ
ಪಡೆವುದು ನೋಡಾ. ಅಂಗಲಿಂಗಗಳ
ಸಂಯೋಗವ ತೋರಿ ಅಖಂಡ
ಪರಶಿವಲಿಂಗೈಕ್ಯವನುಂಟುಮಾಡಿ ಕೊಡುವ
ಅನಂತ ಶಕ್ತಿಯನು ಐಕ್ಯಸ್ಥಲದಲ್ಲಿ ಪಡೆವುದು
ನೋಡಾ. ಇಂತಪ್ಪ ಷಟಸ್ಥಲಗಳಲ್ಲಿ ಷಡ್ವಿಧ
ಶಕ್ತಿಗಳ ಸ್ಥಳಕುಳಂಗಳ ತಿಳಿದು, ಷಡ್ವಿಧ
ಲಿಂಗಗಳಲ್ಲಿ ಧ್ಯಾನ ಪೂಜಾದಿಗಳಿಂದ
ಅಂಗಗೊಂಡು ಭವದ ಬಟ್ಟೆಯ ಮೆಟ್ಟಿ
ನಿಂದಲ್ಲದೆ ಷಟ್‌ಸ್ಥಲಬ್ರಹ್ಮಿಗಳಾಗರು.
ಇಂತಲ್ಲದೆ ಅಪವಾದ ನಿಂದೆಗಳ ಪರರ
ಮೇಲೆ ಕಣ್ಣಾಣದೆ ಹೊರಿಸುತ್ತ ಪರದಾರ
ದಾಸಿ ವೇಶಿ ಸೂಳೆಯರ ಕೂಡಿ ಭುಂಜಿಸಿ
ತಾಂಬಲತಿಂಬ ಹೇಸಿ ಮೂಳರು
ಪೋತರಾಜ, ಜೋಗಿ, ಕ್ಷಪಣರಂತೆ,
ಜಟಾ ತುರುಬು, ಬೋಳಮಂಡೆಗೊಂಡು
ಕೂಳಿಗಾಗಿ ತಿರುಗುವ ಮೂಳ
ಚುಕ್ಕೆಯರ ವಿರಕ್ತ
ಷಟ್‌ಸ್ಥಲಬ್ರಹ್ಮಿಗಳೆನಬಹುದೇನಯ್ಯ?
ಅಂತಪ್ಪ ಅನಾದಿ ಷಟ್‌ಸ್ಥಲಬ್ರಹ್ಮದ
ಷಡ್ವಿಧಶಕ್ತಿಯನರಿದು
ವಿರಕ್ತ ಜಂಗಮ ಷಟ್‌ಸ್ಥಲ ಬಾಲಬ್ರಹ್ಮಿ
ನಿರಾಭಾರಿಯಾದ
ಚೆನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ
ಎಂಬೆನಯ್ಯಾ ಚೆನ್ನಮಲ್ಲಿಕಾರ್ಜುನದೇವರ
ದೇವಾ.

ಈ ಜಗತ್ತು ಚರ ಅಂದರೆ ಚೈತನ್ಯ, ಅಚರ ಎಂದರೆ ಜಡ-ಎರಡೂ ವಸ್ತುಗಳಿಂದ ಕೂಡಿದೆ. ಇದು ಪರಮಾತ್ಮನ ಚಿದ್ಗರ್ಭದಿಂದ ಉದಯಿಸಿದೆ. ಆದ್ದರಿಂದ ಇದು ದೇವರಿಂದ ಅಭಿನ್ನವಾಗಿದೆ. ಹೀಗಾಗಿ ಸಕಲ ಜೀವರಾಶಿಗಳಲ್ಲಿ ತನ್ನ ಆತ್ಮ ಚೇತನವಿದೆ, ತನ್ನಾತ್ಮ ಚೇತನದಲ್ಲಿ ಸಕಲ ಜೀವರಾಶಿಗಳಿವೆ ಎಂದು ಭಾವಿಸಿ ದಯಾಗುಣವನ್ನು ಅಳವಡಿಸಿಕೊಳ್ಳುವುದು ಭಕ್ತಿ ಸ್ಥಲದ ಪ್ರಮುಖ ಲಕ್ಷಣ. ಜೀವನದಲ್ಲಿ ಬರುವ ಅಪವಾದ, ನಿಂದೆ, ಎಡರು, ಆಪತ್ತುಗಳ ಸಮಯದಲ್ಲಿ ಎದೆಗುಂದದೆ ಬರುವ ಸುಖ-ದುಃಖ ಖೇದ ಸಂತೋಷಗಳನ್ನು ಪರಮಾತ್ಮನ ಆಜ್ಞೆ ಎಂದು ಸಮಚಿತ್ರದಿಂದ ಸ್ವೀಕರಿಸುವುದು, ತೃಪ್ತಿಯ ಮನೋಭಾವವನ್ನು ತಾಳಿರುವುದು ಮಾಹೇಶ್ವರ ಸ್ಥಲದ ಪ್ರಮುಖ ಲಕ್ಷಣ. ಪಂಚವಿಂಶತಿ ತತ್ವವಾದ ದೇಹ ಮತ್ತು ಪ್ರಪಂಚಕ್ಕೆ ಮೂಲಿಗನಾದ ಅನಾದಿ ಪರಶಿವ ಲಿಂಗದೇವನ ಅನುಗ್ರಹವನ್ನು ಪಡೆಯುವುದು ಪ್ರಸಾದಿ ಸ್ಥಲದ ಪ್ರಮುಖ ಲಕ್ಷಣ. ದೇಹಾದಿ ಪ್ರಪಂಚದ ಎಲ್ಲ ಚಟುವಟಿಕೆಗಳು ತನ್ನ ಆಶ್ರಯದಲ್ಲಿಯೇ ನಡೆಯುತ್ತವೆ, ತಾನು ಯಾವುದನ್ನೂ ಆಶ್ರಯಿಸದ ಸರ್ವಸ್ವತಂತ್ರನು ಎಂಬ ಅರಿವನ್ನು ಹೊಂದುವ ಸಮಷ್ಟಿ ಪ್ರಜ್ಞೆಯನ್ನು ಹೊಂದುವುದೇ ಪ್ರಾಣಲಿಂಗಿಯ ಪ್ರಮುಖ ಲಕ್ಷಣ. ತನ್ನಾಶಯದಲ್ಲಿ ಇರುವ ಕಣ್ಣಿಗೆ ಕಾಣುವ ಜಗತ್ತು ಅನಿತ್ಯವಾಗಿದೆ. ಇದಕ್ಕೆ ಮೂಲ ಕಾರಣನಾದ ಲಿಂಗದೇವನೊಬ್ಬನೇ ನಿತ್ಯ ಎಂಬ ಅರಿವನ್ನುಹೊಂದುವ ಶಕ್ತಿಯನ್ನು ಪಡೆಯುವುದೇ ಶರಣ ಸ್ಥಲದ ಪ್ರಮುಖ ಲಕ್ಷಣ. ಅಂಗಲಿಂಗಗಳ ಸಂಯೋಗದ ಪಥವನ್ನು ತೋರಿ ಪರಮಾತ್ಮನೊಡನೆ ಐಕ್ಯವನ್ನು ಹೊಂದುವ ಶಕ್ತಿಯನ್ನು ಪಡೆಯುವುದೇ ಐಕ್ಯ ಸ್ಥಲದ ಪ್ರಮುಖ ಲಕ್ಷಣ.

ಹೀಗೆ ಆರು ಸ್ಥಲಗಳಲ್ಲಿ ಷಡ್ವಿಧ ಶಕ್ತಿಗಳಾದ ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿಗಳನ್ನು ಅಳವಡಿಸಿ, ಷಡ್ಲಿಂಗಗಳಾದ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳನ್ನು ಧ್ಯಾನ ಪೂಜಾದಿಗಳಿಂದ ಅಳವಡಿಸಿಕೊಂಡು ಭವದ ಬಟ್ಟೆಯನ್ನು ಮೆಟ್ಟಿ ನಿಂತವರು ಮಾತ್ರ ಷಟ್‌ಸ್ಥಲ ಬ್ರಹ್ಮಿಗಳಾಗುವರು.

ಹೀಗೆ ಮಾಡದೆ ಅನ್ಯರ ಮೇಲೆ ನಿಂದೆ, ಅಪವಾದ ಹೊರಿಸುತ್ತ ಪರಸ್ತ್ರೀಯರ ಸಹವಾಸ, ದಾಸಿಯರು, ವೇಶ್ಯೆಯರ ಸಹವಾಸ ಮಾಡುತ್ತ ಪೋತರಾಜರು, ಜೋಗಿಗಳು, ಕ್ಷಪಣರಂತೆ ಜಟೆ-ತುರುಬು ಕಟ್ಟಿಕೊಂಡು, ಮಂಡೆ ಬೋಳು ಮಾಡಿಕೊಂಡು ಕೂಳಿಗಾಗಿ ಮನೆಮನೆ ತಿರುಗುವವರನ್ನು ವಿರಕ್ತರು, ಷಟ್‌ಸ್ಥಲ ಬ್ರಹ್ಮಿಗಳು ಎನ್ನಬಹುದೆ? ಅನಾದಿ ಪರಶಿವನ ಸ್ವರೂಪವನ್ನು ಅರಿತು, ಷಡ್ವಿಧ ಶಕ್ತಿಗಳ ಅಳವಡಿಸಿಕೊಂಡು ವಿರಕ್ತನೂ, ಜಂಗಮ ಮೂರ್ತಿಯೂ, ಬಾಲ ಬ್ರಹ್ಮಚಾರಿ, ನಿರಾಭಾರಿಯಾಗಿರುವ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನ್ನುತ್ತೇನೆ.

340. ಚೈತನ್ಯ ಸಮಾಧಿ

**ಉಸುರಿನ ಪರಿಮಳವಿರಲು
ಕುಸುಮದ ಹಂಗೇತಕಯ್ಯಾ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇತಕಯ್ಯಾ?
ಲೋಕವೆ ತಾನಾದ ಬಳಿಕ ಏಕಾಂತದ
ಹಂಗೇತಕಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಾ.**

ಸಾಧನೆಯನ್ನು ಮಾಡುತ್ತ ಮಾಡುತ್ತ ಪ್ರಾಣಾಯಾಮದಿಂದ ಪ್ರಾಣವಾಯು ಶುದ್ಧಿಯಾಗಿ ಉಸಿರು ಪರಿಮಳಯುಕ್ತವಾಗುವುದು. ಆತ್ಮಲಿಂಗೋಪಾಸನೆ ನಿರಂತರವಾಗಿ ನಡೆಯತೊಡಗುವುದು. ಆಗ ಹೊರಗಿನ ಹೂವಿನ ಹಂಗು ಇರುವುದಿಲ್ಲ, ಕ್ಷಮೆ ಅಂದರೆ ಇನ್ನೊಬ್ಬರು ತಪ್ಪು ಮಾಡಿದಾಗ ಕ್ಷಮಿಸುವ ಗುಣ, ದಮೆ-ಬಹಿರೀಂದ್ರಿಯ ನಿಗ್ರಹ, ಶಾಂತಿ, ಸೈರಣೆ ಇರುವಾಗ ಸಮಾಧಿ ಸ್ಥಿತಿ ಹಂಗು ಇರುವುದಿಲ್ಲ. ಲೋಕವನ್ನು ತನ್ನ ಕುಟುಂಬ ಎಂದು ಭಾವಿಸಿದ ಮೇಲೆ ಏಕಾಂತದ ಹಂಗು ಇರುವುದಿಲ್ಲ. ಸಾಧಕನು ತನ್ನ ಆರಂಭಿಕ ಜೀವನದಲ್ಲಿ ಲೋಕಾಂತವನ್ನು ತಿರಸ್ಕರಿಸಿ ಏಕಾಂತವನ್ನು ಇಷ್ಟಪಡುವನು. ಸಾಧನೆ ಪಕ್ವವಾದಂತೆ ಎಲ್ಲೆಡೆ, ಎಲ್ಲರಲ್ಲಿ ಲಿಂಗದೇವನನ್ನೇ ಕಾಣತೊಡಗುವನು. ಆಗ ಏಕಾಂತವೇ ಬೇಕು ಎನ್ನದೆ ಎಲ್ಲರೊಡನೆ ಹೊಂದಿಕೊಳ್ಳುವನು.

341. ಮಾಯೆಯ ಉಪಟಳ

**ನೋಡಿಹೆನೆಂದಡೆ ದೃಷ್ಟಿ
ಮರೆಯಾಯಿತ್ತು.ಕೂಡಿಹೆನೆಂದಡೆ ಭಾವ
ಮರೆಯಾಯಿತ್ತು.
ಏನೆಂಬೆನೆಂತೆಂಬೆನಯ್ಯಾ? ಅರಿದಿಹೆ
ನೆಂದಡೆ ಮರಹು ಮರೆಯಾಯಿತ್ತು.
ನಿನ್ನ ಮಾಯೆಯನತಿಗಳೆವಡೆ ಎನ್ನಳವೆ?
ಕಾಯಯ್ಯಾ ಚೆನ್ನಮಲ್ಲಿಕಾರ್ಜುನ ದೇವರ
ದೇವಾ**


ತ್ರಾಟಕಯೋಗ ಮಾಡುವ ಮೊದಲ ದಿನಗಳಲ್ಲಿ ಸಾಧನೆ ಕುಂಟುತ್ತಾ ಸಾಗುತ್ತದೆ. ಇಷ್ಟಲಿಂಗವನ್ನು ದಿಟ್ಟಿಸಿ ನೋಡುವಾಗ ಕಣ್ಣಲ್ಲಿ ನೀರು ತುಂಬಿಕೊಂಡು ದೃಷ್ಟಿ ಮಂಕಾಗುತ್ತದೆ. ಲಿಂಗಾಂಗ ಸಾಮರಸ್ಯದ ಅನುಭವದ ಹತ್ತಿರ ಹೋಗುವಾಗ ಭಾವವು ಸೋಲುತ್ತದೆ. ಜ್ಞಾನ ಪ್ರಭೆಯಿಂದ ಅರಿತುಕೊಳ್ಳಬೇಕು ಎಂದು ಪ್ರಯತ್ನ ಮಾಡುವಾಗ ಮರೆವು ಅಡ್ಡಬರುತ್ತದೆ. ಒಂದು ಬಗೆಯ ತನ್ಮಯತೆ ಆವರಿಸಿಕೊಳ್ಳುತ್ತದೆ. ದೇವಾ, ಇದು ನನ್ನ ಮಾಯೆಯೇ ಸರಿ; ಇದನ್ನು ಗೆಲ್ಲುವುದು ನನ್ನ ಪ್ರಯತ್ನಕ್ಕೆ ಮೀರಿದ್ದು, ನೀನೇ ನನ್ನನ್ನು ರಕ್ಷಿಸು.

ಮುಂದುವರಿಯುವುದು...

ಜಯತು ಜಯತು ನೀಲಾಂಬಿಕಾ !!!



ಜಯತು ಜಯತು ನೀಲಾಂಬಿಕಾ
ತಾಯಿ ನಿನಗೆ ವಂದಿಪೆ
ಜಯತು ಜಯತು ಶರಣ ಮಾತೆ
ಎಮ್ಮ ನೀನು ರಕ್ಷಿಸು ॥ ಪ ॥



ಶ್ರೀ ಗುರು ಬಸವಣ್ಣನ ಮಡದಿಯಾಗಿ ಬಂದೆಯೌ
ಶರಣರೆಲ್ಲರ ಸಲಹಿದ ಮಾತೆಯಾಗಿ ನಿಂದೆಯೌ
ನೆರೆದ ಜಂಗಮರೆಲ್ಲರಿಗೆ ಮಮತೆಯ ತಾಯಿಯಾಗಿ
ಚೊಕ್ಕ ಮನದಿ ಸೇವೆಗೈದೆ ಪರಮ ದಾಸೋಹಿಯಾಗಿ ॥ 1 ॥



ಪತಿಗೆ ನೀನು ಮಾತೆಯಾದೆ ಪತಿಯಲ್ಲೇ ಪಿತನ ಕಂಡೆ
ಬಸವ ಗುರುವಿನ ವಿಚಾರ ಪತ್ನಿ ಎಂಬ ಬಿರುದು ಪಡೆದೆ
ಲಿಂಗ ಸಂಗಿ ಮಂಗಳಾಂಗಿ ಚನ್ನಬಸವ ಮಾತೆಯೆ
ಅಕ್ಕಮಹಾದೇವಿಯ ಅಕ್ಕರೆಯ ತಾಯಿಯೆ ॥ 2 ॥

ಬಸವ ಗುರುವಿನೈಕ್ಯವಂ ತಿಳಿದೂ ನೀನು ಎದೆಗೆಡದೆ
ಕರದ ಇಷ್ಟಲಿಂಗದಲ್ಲೇ ಬಸವ ದರ್ಶನ ಪಡೆದೆಯೌ
ಕುಂಟಲಿನಿ ಯೋಗದಲ್ಲಿ ಪರಮ ಸಿದ್ಧಿ ಪಡೆದ ನೀನು
ಇಚ್ಛಾ ಮರಣೆಯಾಗಿ ಲಿಂಗದೇವನಲ್ಲಿ ಬೆರೆದೆಯೌ ॥ 3 ॥



ಮಹಾಮನೆಯ ಹೊಂಬೆಳಕೆ ಅನುಭಾವದ ತವ ನಿಧಿಯೆ
ಅನುಭವ ಮಂಟಪದ ಆತ್ಮ ಜ್ಞಾನ ಶುಭ ಸುಧೆಯೆ
ಮಾತೆ ನಿನ್ನ ಬದುಕು ಧನ್ಯ, ನಿನ್ನ ಪಡೆದ ನಾವು ಧನ್ಯ
ಸಚ್ಚಿದಾನಂದ ಸುತೆ ನಿನ್ನ ನುಡಿ ನಮಗೆ ಮಾನ್ಯ ॥ 4 ॥

ಜಯತು ಜಯತು ನೀಲಾಂಬಿಕಾ
ತಾಯಿ ನಿನಗೆ ವಂದಿಪೆ
ಜಯತು ಜಯತು ಶರಣ ಮಾತೆ
ಎಮ್ಮ ನೀನು ರಕ್ಷಿಸು ॥ ಪ ॥

* ಲೇಖಕರು: – ಪೂಜ್ಯಶ್ರೀ ಮಹಾಜಗದ್ಗುರು ಡಾ. ಮಾತೆ ಮಹಾದೇವಿ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಪುಟ್ಟಣ್ಣಚೆಟ್ಟಿ ಪುರಭವನ (ಟೌನ್‌ಹಾಲ್), ಸಿಟಿ ಮಾರುಕಟ್ಟೆ, ಬೆಂಗಳೂರಿನಲ್ಲಿ

ದೇವ(ಭಾನು)ವಾರ 7ಆಗಸ್ಟ್ 2016ರಂದು ಬೆಳಗ್ಗೆ 10.30ಕ್ಕೆ

ವಿಶ್ವಗುರು ಬಸವಣ್ಣನವರ 821ನೇ ಲಿಂಗೈಕ್ಯ ಸಂಸ್ಮರಣೆ

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 821ನೆಯ ಲಿಂಗೈಕ್ಯ ದಿನವು .07-8-2016ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 821ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ವಿವರ : 1. ಬೆಳಗ್ಗೆ 10-30ಗಂಟೆಗೆ ಕಾರ್ಯಕ್ರಮ ಆರಂಭ.
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ (ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3-30 ರಿಂದ 4-30 ವಚನ ನೃತ್ಯ ರೂಪಕ ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕಗಳನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿವೆ.

ರಾಜಾಜಿನಗರದ ಬಸವಮಂಟಪದಲ್ಲಿ

ಶಿವ (ಸೋಮ)ವಾರ 8 ಆಗಸ್ಟ್ 2016ರಂದು ಬೆಳಗ್ಗೆ 10.30ಕ್ಕೆ

ನೀಲಾಂಬಿಕಾ ಷಷ್ಠಿ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಡಾ. ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ಆಸ್ಪತ್ರೆಗಳಲ್ಲಿ ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ಕಾರ್ಯಕ್ರಮ ವ್ಯವಸ್ಥಾಪಕರು
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ಬೆಂಗಳೂರು-560010



ಅಂತರಂಗ ಬಹಿರಂಗ

✠ ಪೂಜ್ಯ ಶ್ರೀ
ಚನ್ನಬಸವಾನಂದ
ಸ್ವಾಮೀಜಿ

ದಯವೇ ಧರ್ಮದ ಮೂಲ

ನಾನು ಆಶ್ರಮದಲ್ಲಿ ಕುಳಿತಿರುವಾಗ ಎಪ್ಪತ್ತೈದು ವರ್ಷದ ವಯೋವೃದ್ಧ ವ್ಯಕ್ತಿಯೊಬ್ಬ ಬಂದು ದರ್ಶನ ಮಾಡಿದ. ಏನಜ್ಜ ಯಾವೂರು? ಎಂದೆಲ್ಲ ಯೋಗಕ್ಷೇಮ ವಿಚಾರಿಸಿದಾಗ ತನ್ನ ಪರಿಚಯವನ್ನು ತಾನೆ ಮಾಡಿಕೊಟ್ಟ. "ನನಗೆ ಹಿಂದೆ–ಮುಂದೆ ಯಾರೂ ಇಲ್ಲ. ನನ್ನ ಹೆಂಡತಿ ಇಲ್ಲಿವರೆಗೆ ನನ್ನ ಜತೆ ಇದ್ದಳು ದೀರ್ಘಕಾಲದ ವರೆಗೆ ರೋಗದಿಂದ ಬಳಲಿ ಇತ್ತೀಚಿಗೆ ವಿಧಿವಶಳಾದಳು. ಈಗ ನಾನು ಒಂಟಿಯಾಗಿರುವೆ. ಆದ್ದರಿಂದ ತಮ್ಮ ಆಶ್ರಯದಲ್ಲಿದ್ದು ಏನಾದರೂ ಸೇವೆ ಮಾಡುವೆ ಅವಕಾಶ ಕೊಡಿ ಎಂದು ಕೇಳಿಕೊಂಡ.

ಈ ವಯಸ್ಸಿನಲ್ಲಿ ಅನಾಥವಾಗಿ ಇರುವ ಒಂಟಿ ಜೀವ ಎಲ್ಲಿ ಹೋಗಬೇಕು! ಮಕ್ಕಳೂ ಇಲ್ಲ, ಬಂಧು ಬಾಂಧವರೂ ಇಂಥ ಸಂದರ್ಭದಲ್ಲಿ ಯಾರೂ ಆಗುವುದಿಲ್ಲ. ಏನು ಮಾಡ್ತಾನೆ ಇರಲಿ ಅಂತ ಒಪ್ಪಿಗೆ ಕೊಟ್ಟಾಯಿತು. ಸುಮ್ಮನೆ ಖಾಲಿ ಇರುವ ಬದಲು ಆಶ್ರಮದ ಮಹಾದ್ವಾರದ ಹತ್ತಿರ ಕುಳಿತು ವಾಚಮನ್ ಕೆಲಸ ಮಾಡಲು ಹೇಳಿದೆ. ಬಹಳ ನಿಯತ್ತಿನಿಂದ ಕಾಯಕ ಮಾಡುತ್ತಾನೆ. ಭಾರವಾದ ಕೆಲಸ ಯಾವುದೂ ಆಗಲ್ಲ. ಗೇಟ್ ಹತ್ತಿರ ಕುಳಿತುಕೊಳ್ಳುವುದು ಮೂರು ಹೊತ್ತು ಪ್ರಸಾದ, ರಾತ್ರಿ ಹೊತ್ತು ವಾಚಮನ್ ಕೊಠಡಿಯಲ್ಲಿ ಮಲಗುವುದು ಹೀಗೆ ಸೇವೆ ಮಾಡಿದ.

ಒಂದು ತಿಂಗಳ ನಂತರ ಸಂಬಳ ಕೇಳಿದ ಸಂಬಳ ತಗೊಂಡು ಏನು ಮಾಡ್ತಿ ಅಜ್ಜ! ನಿನ್ನ ಹೆಸರಲ್ಲಿ ಬ್ಯಾಂಕನಲ್ಲಿ ಇಡುತ್ತೇವೆ ಹಣ ಯಾಕ ಹಾಳು ಮಾಡ್ತಿ ಅಂತ ಹೇಳಿದಾಗ ಅಜ್ಜ ಹೇಳಿದ 'ನನ್ನ ಮನೆವರ ದವಾಖಾನಿಗಾಗಿ ನಮ್ಮ ಊರಾಗ ಸಹುಕಾರ ಹತ್ತಿರ 3 ಲಕ್ಷ ಸಾಲ ಮಾಡಿದ್ದೀನಿ ಈಗ ಮುಕ್ಕಾಲು ತೀರಿಸಿದ್ದೀನಿ ಇನ್ನೊಂದು ಕಾಲು ಭಾಗ ಬಾಕಿ ಉಳಿದಿದೆ, ಹೆಂಡತಿಗೆ ದವಾಖಾನೆಗೆ ತೋರಿಸಲಿಕ್ಕೆ ಮಾಡಿದ ಸಾಲ ತೀರಿಸುವುದೊಂದೆ ನನ್ನ ಜೀವನದ ಗುರಿ ಅದನ್ನ ತೀರಿಸಿಬಿಟ್ರೆ ಋಣಮುಕ್ತನಾಗಿ ಸಂತೋಷದಿಂದ ಪ್ರಾಣ ಬಿಡ್ತೀನಿ.

ಕೆಲವೊಮ್ಮೆ ಅಜ್ಜ ಹೆಂಡ ಕುಡಿದು ಮಲಗುತ್ತಾನೆ. ರಾತ್ರಿ 12ರ ನಂತರ ಯಾರೆ ಬಂದರೂ ಗೇಟ್ ತೆರೆಯುವುದಿಲ್ಲ. ಇಂಥ ಕುಡುಕನಿಗೆ ಯಾಕೆ ಇಟ್ಟುಕೊಳ್ಳಬೇಕು ಕೆಲವು ಜನ ಹಿರಿಯ ಭಕ್ತರ ಆಕ್ಷೇಪ. ಕುಡಿಯುವ ಕಾರಣ ಏನೆಂದು ಕೇಳಿದಾಗ ನನಗೆ ಕರುಳು ಚುರ್ ಎಂದಿತು.

ಬಾಲ್ಯದಿಂದಲೂ ಜೀತ ಮಾಡುತ್ತ ಯೌವನದಲ್ಲೂ ಬೇರೆಯವರ ಜೀತದಾಳಗಿಯೆ ದುಡಿದು, ಇದ್ದೊಬ್ಬ ಜೀವನ ಸಂಗಾತಿಯೂ ಅಗಲಿದಳು. 75ರ ಮುಪ್ಪಾವಸ್ಥೆಯಲ್ಲೂ ಸಾಲ ತೀರಿಸಲಿಕ್ಕಾಗಿಯೇ ದುಡಿಯುತ್ತಿರುವೆ. ಇದೇನು ಜೀವನ ಎಂಬ ಚಿಂತೆ ರಾತ್ರಿ ಮಲಗಲು ಬಿಡುವುದಿಲ್ಲ. ಆ ಕಾರಣಕ್ಕಾಗಿ ಚಿಂತೆಯನ್ನು ಮರೆಯುವುದಕ್ಕಾಗಿ ಸಾರಾಯಿ ಕುಡಿಯುತ್ತೇನೆ ಎನ್ನುತ್ತಾನೆ ಅಜ್ಜ. ಈ ಇಳಿವಯಸ್ಸಿನಲ್ಲಿ ಆತನನ್ನು ಪರಿವರ್ತಿಸಲಿಕ್ಕೂ ಸಾಧ್ಯವಿಲ್ಲ. ಆಶ್ರಮದಿಂದ ಹೊರಗೆ ಕಳಿಸಲಿಕ್ಕೂ ಅಂತರಾತ್ಮ ಒಪ್ಪದು. ದಯವೇ ಧರ್ಮದ ಮೂಲವೆಂದು ಗುರು ಬಸವಣ್ಣನವರು ಹೇಳಿದ್ದು ಕೇವಲ ಕಂಠಪಾಠ ಮಾಡಿ ಇತರರಿಗೆ

ಹೇಳಲಿಕ್ಕಲ್ಲ. ಅದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲಿಕ್ಕೆ ದಯೆ, ಮಾನವೀಯತೆ ಮತ್ತು ಕರುಣೆ ಇವು ಧರ್ಮದ ತಾಯಿಬೇರು ಎಂಬುದನ್ನು ಮನಗಂಡು ಎಲ್ಲರನ್ನು ನನ್ನವರೆಂದು ಪ್ರೀತಿಸೋಣ ಆಗ ಮಾತ್ರ ದೇವನ ಕೃಪೆಗೆ ಪಾತ್ರರಾಗಲು ಸಾಧ್ಯ.

ಎಲ್ಲರೂ ಒಂದು ದಿನ ಮುದುಕರಾಗಲೇಬೇಕು:

30 ವರುಷ ವಯಸ್ಸಿನ ವ್ಯಕ್ತಿಯೊಬ್ಬ ತನ್ನ ತಂದೆಯನ್ನು ವೃದ್ಧಾಶ್ರಮಕ್ಕೆ ಸೇರಿಸಲು ಬಂದಾಗ ತಂದೆ ನಿರ್ಲಿಪ್ತವಾಗಿ ವೃದ್ಧಾಶ್ರಮದ ಆವರಣದೊಳಗೆ ಬರುತ್ತಾನೆ. ಆಶ್ರಮದ ವ್ಯವಸ್ಥಾಪಕರಾದ ಹಿರಿಯ ವ್ಯಕ್ತಿಯ ಜೊತೆಯಲ್ಲಿ ನಗು ನಗುತ್ತ ಮಾತಾಡುತ್ತಾನೆ. ಇದನ್ನು ನೋಡಿದ ಮಗನಿಗೆ ಆಶ್ಚರ್ಯವಾಯಿತು. ಅಪ್ಪ ನಿನಗೆ ಇವರ ಪರಿಚಯವಿದೆಯಾ? ಅದು ಹೇಗೆ? ಅಂದಾಗ ; ಮೂವತ್ತು ವರ್ಷದ ಹಿಂದೆ ಈ ಆಶ್ರಮದಿಂದಲೇ ಒಂದು ಅನಾಥ ಮಗುವನ್ನು ತೆಗೆದುಕೊಂಡು ಹೋಗಿ ಸಾಕಿದೆ. ಆ ಮಗುವೇ ನೀನು ಎಂದು ಅಪ್ಪ ಹೇಳಿದಾಗ, ಮಗ ದಿಗ್ಭ್ರಾಂತನಾದ.

ತಂದೆ-ತಾಯಿಯಿಲ್ಲದ ನನ್ನಂಥ ಅನಾಥ ಮಗುವನ್ನು 30 ವರ್ಷಗಳ ವರೆಗೆ ನಿಸ್ವಾರ್ಥದಿಂದ ಸಾಕಿ ಸಲಹಿ ಈ ಮಟ್ಟಕ್ಕೆ ಬೆಳೆಸಿದ ವಯೋವೃದ್ಧ ತಂದೆಯನ್ನು ವೃದ್ಧಾಶ್ರಮಕ್ಕೆ ಕಳಿಸುವುದು ಮಹಾಪಾಪವಲ್ಲವೇ ? ಎಂದು ಜ್ಞಾನೋದಯವಾಗುವುದು. ಆಗ ತಂದೆಯನ್ನು ವಾಪಸ್ ಮನೆಗೆ ಕರೆದೊಯ್ಯುತ್ತಾನೆ.

ಇಂಥ ಹೃದಯವಿದ್ರಾವಕ ಘಟನೆಗಳನ್ನು ಅನೇಕ ಸಾರಿ ನಾವು ನೋಡುತ್ತೇವೆ ಏಕೆ ಹೀಗಾಗುತ್ತಿದೆ ಎಂದು ಯೋಚನೆ ಮಾಡಿದಾಗ ಇದಕ್ಕೆ ಹಲವಾರು ಕಾರಣಗಳಿವೆ. ಮಗನು ವಯಸ್ಸಾದ ಮೇಲೆ ತಂದೆಗೆ ವೃದ್ಧಾಶ್ರಮಕ್ಕೆ ಕಳಿಸಿದ ಮಾತ್ರಕ್ಕೆ ಆತನೇ ಅಪರಾಧಿ ಎಂದು ಹೇಳಲಾಗದು. ಮಕ್ಕಳಿಗೆ ಉತ್ತಮ ಸಂಸ್ಕಾರ ಸಿಗದಿರುವುದು ಮೊದಲನೆ ಕಾರಣವಾದರೆ, ಧರ್ಮವಂತರಾಗಿದ್ದರೂ ಇಂದಿನ ಕಂಪ್ಯೂಟರ್ ಯುಗದಲ್ಲಿ ಕೌಟುಂಬಿಕ ವ್ಯವಸ್ಥೆಯ ನಿರ್ವಹಣೆ, ಅನಿವಾರ್ಯತೆ ಹಾಗೆ ಮಾಡಿಸುತ್ತದೆ. ನಮ್ಮ ಸರ್ಕಾರದ ಯೋಜನೆಗಳು ನಮ್ಮನ್ನು ಆಳುವ ರಾಜಕೀಯ ಮುಖಂಡರು ಸಹ ಈ ಪರಿಸ್ಥಿತಿಗೆ ನೇರ ಹೊಣೆಗಾರರಾಗಿದ್ದಾರೆ. ಹಳ್ಳಿಗಳ ಉದ್ಧಾರವಾಗದ ಹೊರತು ಈ ಸಮಸ್ಯೆಗಳಿಗೆ ಪರಿಹಾರ ಸಿಗದು. ಹಿಂದಿನ ಕಾಲದಲ್ಲಿ ಹಳ್ಳಿಗಳು ಸಮೃದ್ಧವಾಗಿದ್ದವು. ಅವಿಭಕ್ತ ಕುಟುಂಬಗಳಲ್ಲಿ ನಾಲ್ವತ್ತರಿಂದ ಐವತ್ತು ಜನ ಒಂದೇ ಸೂರಿನಡಿ ವಾಸವಾಗುತ್ತಿದ್ದರು. ಹತ್ತಾರು ಜನ ಹೆಣ್ಣು ಮಕ್ಕಳು ಕುಟುಂಬದಲ್ಲಿ ದುಡಿಯುತ್ತಿದ್ದರು. ಹತ್ತಾರು ಜನ ಹೊರಗಡೆ ದುಡಿದು ಗಳಿಸುವವರು, ಹತ್ತಾರು ಜನ ಗೃಹಿಣಿಯರು ಮನೆಯಲ್ಲಿ ಕೆಲಸ ಮಾಡುವವರು ಇದ್ದಾಗ ನಾಲ್ಕ ಜನ ಹಿರಿಯರು, ವೃದ್ಧರು ಅಥವಾ ನಾಲ್ಕು ಜನ ಕೆಲಸ ಮಾಡಲಾರದ ಸೋಮಾರಿಗಳು ಕುಳಿತು ತಿಂದರೂ ಭಾರ ಅನಿಸುವುದಿಲ್ಲ. ಆದ್ದರಿಂದ ಹಿಂದಿನ ಕಾಲದಲ್ಲಿ ವಯಸ್ಸಾದವರು, ತಂದೆ ಅಥವಾ ತಾಯಿಯಿಲ್ಲದ ಮಕ್ಕಳು ಸಹ ಆ ದೊಡ್ಡ ಕುಟುಂಬದಲ್ಲಿ ಪೋಷಿಸಲ್ಪಡುತ್ತಿದ್ದರು. ಇಂದು ಹಳ್ಳಿಗಳ ವ್ಯವಸ್ಥೆ ಹಾಳಾಗಿದೆ. ಎಲ್ಲರೂ ಪಟ್ಟಣ ಸೇರುತ್ತಿದ್ದಾರೆ. ವಿಭಕ್ತ ಕುಟುಂಬಗಳಲ್ಲಿ ಅದೂ ನಗರಗಳಲ್ಲಿ ಗಂಡ-ಹೆಂಡತಿ ಇಬ್ಬರೂ ದುಡಿಯಲೇಬೇಕು. ಆಗ ಮಕ್ಕಳ ಪೋಷಣೆಗೆ Baby Care Homeಗಳೆ ಗತಿ.

ಸೊಸೆ ಹೊರಗೆ ಕಾಯಕ ಮಾಡುವವರೆ ಆಗಲಿ, ಮನೆಯ ಒಳಗೆ ಕೆಲಸ ಮಾಡುವ ಮಹಿಳೆಯರೆ ಆಗಲಿ ಒತ್ತಡವಂತೂ ಎಲ್ಲರಿಗೂ ಇದ್ದೆ ಇರುತ್ತದೆ. ಅತ್ತೆ-ಮಾವ ಅವರನ್ನು ತಾಯಿ-ತಂದೆ ಎಂದು ಭಾವಿಸಿ ಸೇವೆ ಮಾಡಿದರೆ, ಸೇವೆ ಮಾಡಿದ ಪುಣ್ಯದ ಫಲವು ತಮಗೂ, ಮಕ್ಕಳಿಗೂ ಕಾಪಾಡುವುದು. ಒಬ್ಬ ಮಗ ತಂದೆ-ತಾಯಿ ಬಗ್ಗೆ ಭಕ್ತಿ, ಗೌರವ ಇಟ್ಟುಕೊಂಡಿದ್ದಾನೆ ಅಂದಾಗ ಕೊನೆವರೆಗೆ ಅವನ ಮೇಲೆಯೇ ಭಾರ ಹೊರಿಸುವುದೂ ತಪ್ಪು. ಎಲ್ಲ ಮಕ್ಕಳು ಸಮನಾಗಿ ಜವಾಬ್ದಾರಿ ಹೊರಬೇಕು. ನಾವು ಕೂಡ ಒಂದು ದಿನ ಅಜ್ಜ-ಅಜ್ಜಿ ಆಗುತ್ತೇವೆ ಎಂಬ ಪ್ರಜ್ಞೆ ಎಲ್ಲರಲ್ಲೂ ಇರಬೇಕು.

ಇಷ್ಟಲಿಂಗೋಪಾಸನೆ ವೈಜ್ಞಾನಿಕ ಅರಿವು

ಶ್ರೀ ಬಸವ ಕುಮಾರ ಸ್ವಾಮೀಜಿ



ಬುದ್ಧಿ:-

ಬುದ್ಧಿಶಕ್ತಿ ಇಡೀ ಬ್ರಹ್ಮಾಂಡವನ್ನು ವ್ಯಾಪಿಸಿದೆ. ಇದರ ಆಳ-ಹರಹುಗಳನ್ನು ವಿಶ್ಲೇಷಿಸುತ್ತಾ ಹೋದರೆ ಪಾತಾಳದಿಂದತ್ತತ್ತಲೂ, ಬ್ರಹ್ಮಾಂಡದಿಂದತ್ತತ್ತಲೂ ತನ್ನ ಸ್ಥಾನವನ್ನು ಬಳಸಿಕೊಂಡಿದೆ. ಇದು ಚುರುಕಾಗಿ (ಶಾರ್ಪಾಗಿ) ಇದ್ದರೆ ಮಾತ್ರ ಇಹಲೋಕದಲ್ಲಿ ಒಳ್ಳೆಯ ಸ್ಥಾನಮಾನ ದೊರೆಯುತ್ತದೆ. ಒಂದು ವೇಳೆ ಬುದ್ಧಿಶಕ್ತಿ ಮಂಕಾಗಿದ್ದರೆ ಅವನ ಸ್ಥಿತಿ ಕೆಳಮಟ್ಟಕ್ಕಿಳಿಯುತ್ತದೆ. ಕುತಂತ್ರ ಬುದ್ಧಿಯವರು ಬುದ್ಧಿಶಕ್ತಿ ತೀಕ್ಷ್ಣವಾಗಿದ್ದರೂ ಅವರ ಕೃತಿಗಳು ತನಗೂ ಇತರರಿಗೂ ಅಪಾಯವನ್ನುಂಟು ಮಾಡುತ್ತದೆ. ಜಾತೀಯತೆ, ಮೂಢನಂಬಿಕೆ, ಋಷ್ಟಾಚಾರ, ಅಂಧಶ್ರದ್ಧೆ, ಹಲವು ಗುರೋಪಾಸನೆ, ಹಲವು ದೇವತೋಪಾಸನೆ, ಭ್ರಷ್ಟತೆ, ಲಂಚಕೋರತನ, ಪರಸ್ತ್ರೀ-ಪರಪುರುಷ ಗಮನ ಇವೆಲ್ಲವು ಲಿಂಗಯೋಗಕ್ಕೆ ತದ್ವಿರುದ್ಧವಾದ ಅನುಸರಣೆಗಳು. ಲಿಂಗಯೋಗಕ್ಕೆ ಪೂರಕವಾದ ಬುದ್ಧಿ ಎಂದರೆ ಸರಳ, ಶುದ್ಧ, ನಿಷ್ಕಲ್ಮಶ, ನಿರಾಳ, ನಿರಂಜನ ಅವಿರಳವಾದ ಮಹಾಜ್ಞಾನದ ಬೆಳಗು ಇದು ಬುದ್ಧಿಯ ಲಿಂಗಯೋಗ.



ಚಿತ್ತ:- ಇದೊಂದು ಅದ್ಭುತ ವಿಶಾಲವಾದ, ಜಗದಗಲ ಮುಗಿಲಗಲವಾದ ಉಗ್ರಾಣ. ಸ್ಥೂಲ, ಸೂಕ್ಷ್ಮ, ಕಾರಣ ಶರೀರ ಗಳಲ್ಲಿಯ ಆಗು ಹೋಗುಗಳನ್ನೆಲ್ಲ ಇಟ್ಟುಕೊಂಡಂಥ ಸ್ಟೋರ್‌ರೂಮ್. ದೃಶ್ಯಾದೃಶ್ಯಗಳನ್ನು, ಸ್ಪರ್ಶಾಸ್ಪರ್ಶ ಗಳನ್ನು, ರುಚಿ-ಅರುಚಿಗಳನ್ನು, ಶಬ್ದ-ಅಶಬ್ದಗಳನ್ನು, ವಾಸನೆ-ನಿರ್ವಾಸನೆಗಳನ್ನು ಸಂಗ್ರಹಿಸಿಟ್ಟುಕೊಂಡದ್ದು. ಯಾವ ಸಮಯದಲ್ಲಿ ಕಣ್ಣುಗಳು ನೋಡುತ್ತವೆಯೋ, ಕಿವಿಗಳು ಕೇಳುತ್ತವೆಯೋ, ಮೂಗು ವಾಸನೆಯನ್ನು ಗ್ರಹಿಸುತ್ತದೆಯೋ, ನಾಲಿಗೆ ರುಚಿಸುತ್ತದೆಯೋ, ಚರ್ಮ ಸ್ಪರ್ಶಸುತ್ತವೆಯೋ, ಬಾಯಿ ಮಾತನಾಡುತ್ತದೆಯೋ, ಕೈಗಳು ಮುಟುತ್ತವೆಯೋ, ಕೆಲಸಗಳನ್ನು ಮಾಡುತ್ತವಯೋ, ಪಾದಗಳು ಎಲ್ಲಿಯೋ ಹೋಗುತ್ತವೆಯೋ, ಗುದವು ಅಪಾನವಾಯುವನ್ನು ಹಾಗೂ ನಿರುಪಯುಕ್ತವಾದ ಪದಾರ್ಥವನ್ನು ಹೊರಗೆ ಹಾಕುತ್ತದೆಯೋ, ಮನಸ್ಸು ಸಂಕಲ್ಪ-ವಿಕಲ್ಪವನ್ನು ಮಾಡುತ್ತದೆಯೋ ಬುದ್ಧಿಯು ನಿರ್ಣಯಿಸುವುದು, ಅನಿರ್ಣಯಿಸುವುದು, ಸುಬುದ್ಧಿ. ಕುಬುದ್ಧಿ, ದುರ್ಬುದ್ಧಿಯಾಗುವುದೋ, ಅಹಂಕಾರವು ಒಳ್ಳೆಯ ಹಾಗೂ ಕೆಟ್ಟದಕ್ಕೆ ಅಹಂಕರಿಸುವುದೋ ಇವೆಲ್ಲವುಗಳನ್ನು ಇವೆಲ್ಲವುಗಳ ಚಿತ್ರಣವನ್ನು ರಕ್ಷಿಸಿ ಉಗ್ರಾಣದಲ್ಲಿ ಇಟ್ಟು-ಕೊಂಡಿರುತ್ತದೆ. ಈಗ ತಿಳಿಸಿದ ಎಲ್ಲ ವಿಷಯಗಳನ್ನು ಉದಾತ್ತೀಕರಣದತ್ತ ಕಾರ್ಯ ನಿರ್ವಹಿಸಿದರೆ ಅದು ಚಿತ್ತದ ಲಿಂಗಯೋಗ.

ಅಹಂಕಾರ:- ಸರ್ವ ಪ್ರಸಂಗಗಳಲ್ಲಿ ಅಹಂಕಾರವು ಚಿಂತನೆಗೈದು ತನ್ನ ಮೂಲ ಸ್ವರೂಪ ಆತ್ಮನ ಸ್ಥಾನವನ್ನು ಗ್ರಹಿಸಿಕೊಂಡು ಇರುವುದೇ ಅಹಂಕಾರದ ಲಿಂಗಯೋಗ.

ಉದಾ: ಕ್ಷೀರ ಸಾಗರದೊಳಗೆ ಸಕ್ಕರೆ ಗೊಂಬೆಯು ಅದರ ಆಳವನ್ನು ನೋಡಲು ಠಣ್ಣನೇ ಜಿಗಿಯಿತು. ಆಳವನ್ನು ನೋಡಿ ಮೇಲೆ ಬಂದು ಇಷ್ಟು ಇದೆ ಅಂತಾ ಹೇಳುತ್ತದೆಯೇನು? ಇಲ್ಲಾ. ಸಕ್ಕರೆಯ ಗೊಂಬೆ ಕರಗಿ ಕ್ಷೀರ ಸಾಗರದೊಡನೆ ಒಡವೆರೆದು ಒಂದಾಯಿತು. ಇದರಂತೆ ಜೀವಾತ್ಮನೆಂಬ ಸಕ್ಕರೆ ಗೊಂಬೆಯು ಪರಮಾತ್ಮ ಅಥವಾ ಲಿಂಗದೇವನೆಂಬ ಕ್ಷೀರ ಸಾಗರದೊಳಗೆ ಮುಳುಗಿದಾಗ ಮೊದಲಿದ್ದ ಜೀವಾತ್ಮನ ಗುಣವಾದ ಅಲ್ಪಜ್ಞವು ಹೋಗಿ ಸರ್ವಜ್ಞತ್ವವು, ಅಲ್ಪ ಭಾವಾಪನ್ನವು ಹೋಗಿ ಅಧಿಕ ಭಾವಾಪನ್ನವು, ಸಂಕುಚಿತ ಮನೋಭಾವ ತೊಲಗಿ ವಿಶಾಲ ಮನೋಭಾವವು, ಸೀಮಿತ ಸ್ಥಾನ ತೊಲಗಿ ನಿಸ್ಸೀಮತ್ವವು, ಅಂಗವೆಂಬ ಭಾವ ನೀಗಿ ಲಿಂಗವೆಂಬ ಸಾರ್ವತ್ರಿಕ ಭಾವವು ಅಳವಡುವುದು.

ಇದಕ್ಕೆ ಸಾಕ್ಷಿಯಾಗಿ **"ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ ನಿಸ್ಸಂಗವೆನ್ನೆ, ಆಯಿತ್ತೆನ್ನೆ, ಆಗದೆನ್ನೆ ಚನ್ನಮಲ್ಲಿಕಾರ್ಜುನ ದೇವರ ದೇವನಲ್ಲಿ ಘನಲಿಂಗೈಕ್ಯವಾದ ಬಳಿಕ ಏನೂ ಎನ್ನೆ"** ಎಂದು ವೀರ ವೈರಾಗ್ಯ ನಿಧಿ, ಮಹಾ ಯೋಗಿಣಿ, ಜಗನ್ಮಾತೆ ಅಕ್ಕಮಹಾದೇವಿಯವರು ಲಿಂಗಯೋಗದ ಮಹಾ ಮಹಿಮೆಯನ್ನು ನಮಗರುಹಿದ್ದಾರೆ. ಇಲ್ಲಿಯವರೆಗೆ ಇಷ್ಟಲಿಂಗದ ಪರಿಕಲ್ಪನೆ, ಇಷ್ಟಲಿಂಗ ಪೂಜೆಯ ಮಹತ್ವ, ಅದರ ಆಳ-ಹರಹುಗಳನ್ನು ಕೂಲಂಕುಷವಾಗಿ ಅರಿತುಕೊಳ್ಳುತ್ತಾ ಬಂದಿದ್ದೇವೆ. ಕೆಲವರು ಆತ್ಮಲಿಂಗ ಇರುತಿರಲು ಇಷ್ಟಲಿಂಗದ ಅವಶ್ಯಕತೆಯಿದೆಯೇನು? ಎಂದು ಪ್ರಶ್ನೆಗಳನ್ನು ನಮಗೆ ಕೇಳುತ್ತಿರುತ್ತಾರೆ ಇದರ ಕುರಿತು ಸವಿವರವಾಗಿ ಅರಿಯೋಣ.

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮೆ ಲಿಂಗವೆ, ಲಿಂಗದೇವಯ್ಯ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ"

ವಿಶ್ವಗುರು ಬಸವಣ್ಣನವರು ಇಚ್ಚಲಿಂಗ ಚುಳುಕಾಗಿ ಹೇಗೆ ಬಂದಿದೆ ಎಂಬುದನ್ನು ಹೇಳುತ್ತಾರಷ್ಟೆ. ಇದು ದೇವರ ಕುರುಹು-ಪರಮಾತ್ಮನ ಕುರುಹು-ಲಿಂಗದೇವನ ಕುರುಹು. ಒಂದು ಮಾತನ್ನು ಮೊದಲೇ ತಿಳಿದುಕೊಳ್ಳಬೇಕಾಗಿದೆ.

ಪ್ರಪಂಚದ ಎಲ್ಲಾ ಧರ್ಮಗಳನ್ನು. ಅಭ್ಯಾಸ ಮಾಡಿ ನೋಡಿದಾಗ ದೇವರ ಸ್ವರೂಪದ ವಸ್ತುಗಳನ್ನು ಏಳು ರಿತಿಯಾಗಿ ವಿಂಗಡಿಸಬಹುದು.

1. **ಪಿಶಾಚಿ-ದೆವ್ವ-ಭೂತ**
2. **ದೇವತಾ ಪೂಜೆ**
3. **ಭೂತ ಪೂಜೆ**
4. **ಪ್ರಾಣಿ ಪೂಜೆ**
5. **ಪಿತೃ ಪೂಜೆ**
6. **ಗುರು ಪೂಜೆ**
7. **ದೇವ ಪೂಜೆ.**

ಈ ಏಳು ರೀತಿ ಆರೋಹಣ ಸ್ಥಿತಿ. ಗುರು ಬಸವಣ್ಣನವರು ಯಾವುದನ್ನು ಅಧಿಕೃತವಾಗಿ ಪೂಜೆ ಮಾಡಲಿಕ್ಕೆ ಹೇಳುತ್ತಾರೆ. ಗುರು, ಲಿಂಗ, ಜಂಗಮ

1. ಗುರು-ಜಂಗಮ=ವಿಭೂತಿ ಪೂಜೆ
2. ದೇವ ಪೂಜೆ ಒಂದು ಮಾತು ಪೀಠಿಕೆಯಾಗಿ ಹೇಳಬೇಕೆಂದರೆ **"Man is the Crown of Creation".**

1. ಯಾರು ದೆವ್ವ-ಭೂತ-ಪಿಶಾಚಿಗಳನ್ನು ಪೂಜೆ ಮಾಡುತ್ತಾರೆಯೋ ಅವರು ಬೇಬಿಕೇರ್‌ದಲ್ಲಿ ಪ್ರವೇಶ ಪಡೆದು ಹೋಗಿ ಬರುವಂತಹ ಮಕ್ಕಳಿದ್ದ ಹಾಗೆ.
2. ಯಾರು ದೇವತಾ (ಕಾಲ್ಪನಿಕ) ಪೂಜೆಯನ್ನು ಆರಾಧನೆಯನ್ನು ಕೈಕೊಳ್ಳುವರೊ ಅವರು ಪ್ರಾಥಮಿಕ ಶಾಲಾ ಪೂರ್ವ ಶಿಕ್ಷಣ ಪಡೆಯಲು ಅರ್ಹತೆಯುಳ್ಳಂತಹ ವಿದ್ಯಾರ್ಥಿಗಳಿದ್ದಂತೆ ಸರಿ. ಲಕ್ಷ್ಮಿ, ಸರಸ್ವತಿ, ಗಣಪತಿ ವೆಂಕಟೇಶ ಇನ್ನಿತರ ದೇವತಾರಾಧನೆ.
3. ಇದಕ್ಕಿಂತ ಸ್ವಲ್ಪ ಶ್ರೇಷ್ಠವಾದದ್ದು ಭೂತ ಪೂಜೆ ಪ್ರಾಥಮಿಕ ಶಾಲೆ ಮಕ್ಕಳು . ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಇವು ಉಪಯೋಗಕ್ಕೆ ಬರುವಂಥವು.
4. ಭೂತ ಪೂಜೆಗಿಂತಲೂ ಶ್ರೇಷ್ಠವಾದುದು ಪ್ರಾಪೂಜೆ. ಜಡಕ್ಕಿಂತಲೂ ಪ್ರಾಣಿಗಳು ಚೈತನ್ಯ ಸ್ವರೂಪವಾಗಿರುವುದರಿಂದ ಈ ಪೂಜೆಯನ್ನು ಮಾಡುವವರು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿದ್ದ ಹಾಗೆ.
5. ಇನ್ನು ಪ್ರಾಣಿ ಪೂಜೆಗಿಂತಲೂ ಶ್ರೇಷ್ಠವಾದವ ಮನುಷ್ಯ-ಪಿತೃಪೂಜೆ **Ancestors Worship.** ಹಿರಿಯರು-ಶ್ರಾದ್ಧ-ವಂಶಜರು ಈ ಪೂಜೆ ಮಾಡುವವರಿಗೆ ಹೈಸ್ಕೂಲ ವಿದ್ಯಾಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿದ್ದಂತೆ.
6. ಗುರುಪೂಜೆ: ಮಹಾತ್ಮರು-ಜ್ಞಾನಿಗಳು-ಯೋಗಿಗಳು ಇವರ ಪೂಜೆ ಮಾಡುವವರಿಗೆ ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿದ್ದ ಹಾಗೆ. ವಿಭೂತಿ ಪೂಜೆ ಭೂತಿ ಇರುವುದು.

Being and Becoming.

ಉದಾ: ನರೇಂದ್ರ- ಸ್ವಾಮಿ ವಿವೇಕಾನಂದ, ಗದಾಧರ-ರಾಮಕೃಷ್ಣ ಪರಮಹಂಸರು, ಮಹಾದೇವಿ-ಅಕ್ಕಮಹಾದೇವಿ, ಬಸವರಸ-ಬಸವಣ್ಣ, ರತ್ನಮ್ಮಾ-ಮಾತೆ ಮಹಾದೇವಿ, ಸಂಗಮೇಶ-ಲಿಂಗಾನಂದ ಸ್ವಾಮೀಜಿ. ನೀವೂ ಸಹಿತ ವಿಭೂತಿ ಅಗಬೇಕು ವಿಭೂತಿ ಪುರುಷರಾಗಬೇಕು.

7. ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು ದೇವಪೂಜೆ ಈ ಪೂಜೆಯನ್ನು ಮಾಡುವವರು ವಿಶ್ವವಿದ್ಯಾಲುದಲ್ಲಿ (**Post Graduate Students) (M.A, Msc, Bcom)** ಎಂ.ಎ, ಎಮ್‌.ಸಿ, ಬಿಕಾಂ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಂತಾ ಭಾವಿಸಬೇಕು ಶರಣರು ದೇವಪೂಜೆ ಮಾಡಲಿಕ್ಕೆ ಹೇಳಿದ್ದಾರೆಯೆ ವಿನಃ ದೇವ ಅಂದರೆ ಗಂಗಾ-ಗೌರಿವಲ್ಲಭನನ್ನು ಪೂಜೆ ಮಾಡಲಿಕ್ಕೆ ಹೇಳಿಲ್ಲ. ಶಿವನಿಗೆ ದೇವರು ಅನ್ನುವವರು ಶೈವರು. ಆದರೆ ದೇವರಿಗೆ ಶಿವ ಅನ್ನುವವರು ಶರಣರು.

"ದೇವ ಪೂಜೆಯ ಮಾಟ, ದುರಿತ ಬಂಧನದೋಟ, ಶಂಭು ನಿಮ್ಮಯ ನೋಟ ಹೆರೆ ಹಿಂಗದಾ ಕಣ್ಬೆಟ ಸದಾ

ಪುಟ 15ರಲ್ಲಿ ಮುಂದುವರಿಯುವುದು

ಮಹಾನ್ ಶರಣ



ನೀಲ ಗಂಗಾಂಬಿಕೆ

ಲಿಂಗೈಕ್ಯ ಸಂಸ್ಮರಣೆ
ಆಗಸ್ಟ್-8

ಗುರು ಬಸವಣ್ಣನವರ ತಾಯಿ ಮಾದಲಾಂಬಿಕೆಯ ಸ್ವಂತ ಅಣ್ಣನವರೇ ಬಲದೇವರಸರು. ಇವರ ಮಗಳು ಪೃಥ್ವಿಗಗ್ಗಳ ಚೆಲುವೆ ಏಕೈಕ ಸುಪುತ್ರಿ ನೀಲಗಂಗಾಂಬಿಕೆ. ಕೂಡಲ ಸಂಗಮದ ಗುರುಕುಲದಲ್ಲಿ ಅಧ್ಯಯನದ ಪೂರ್ಣ ಘಟ್ಟ ಮುಗಿದಾಗ 21 ವರ್ಷ. ಆ ಸಮಯದಲ್ಲಿ ಘಟಿಕೋತ್ಸವ ಸಮಾರಂಭದ ನಿಮಿತ್ತ ಮನೆದೇವರಾದ ಸಂಗಮಕ್ಕೆ ಬಂದ ಸಮಯದಲ್ಲಿ ಬಸವರಸ ವೈಚಾರಿಕ, ಧಾರ್ಮಿಕ, ಆಧ್ಯಾತ್ಮಿಕತೆಯ ಪ್ರೌಢವಾದ ವಿಚಾರಧಾರೆಗಳನ್ನು ಕಂಡು ಬಲದೇವರಸರು, ಅಕ್ಕನಾಗಲಾಂಬಿಕೆ ಹಾಗೂ ಗುರುಕುಲದ ಅಧಿಪತಿಗಳಾದ ಜಾತವೇದ ಮುನಿಗಳು ಇವರೆಲ್ಲರ ಅಭಿಪ್ರಾಯ ಒಂದಾಗಿ ನೀಲಗಂಗಾಂಬಿಕೆಯನ್ನು ಕೊಟ್ಟು ವಿವಾಹ ಮಾಡಿದರು. ಕ್ರಿ.ಶ. 1155ರಲ್ಲಿ. ಕೆಲವೇ ವರ್ಷಗಳಲ್ಲಿ ಗುರು ಬಸವಣ್ಣನವರ ಆದರ್ಶಗಳನ್ನು ಮೈಗೂಡಿಸಿಕೊಂಡು ಮಹಾಯೋಗಿಣಿಯಾಗಿ "ಸಂಗಯ್ಯಾ" ಎಂಬ ವಚನ ಮುದ್ರಿಕೆಯನ್ನು ಇಟ್ಟು ಸಾಕಷ್ಟು ವಚನಗಳನ್ನು ರಚಿಸಿ ಕೊಟ್ಟಿದ್ದಾರೆ.

ನೀಲಾಂಬಿಕೆಯವರು ಪತಿಯಾದ ಗುರು ಬಸವಣ್ಣನವರಿಗೆ ಮಾತೆಯಾಗಿ ಪತಿಯಲ್ಲೇ ಪಿತನ ಕಂಡು ಅವರಿಗೆ ವಿಚಾರ ಪತ್ನಿಯೆಂಬ ಬಿರುದನ್ನು ಪಡೆದರು. ಚನ್ನಬಸವಣ್ಣನವರಿಗೆ ಮಾತೃಹೃದಯಿಯಾಗಿ ಅಕ್ಕಮಹಾದೇವಿಗೆ ತಾಯಿಯಾಗಿ ಮಾರ್ಗದರ್ಶನ ನೀಡಿದವರಾಗಿದ್ದರು.

ಮಹಾಮನೆಯ ಎಲ್ಲ ಕಾರ್ಯಕಲಾಪಗಳನ್ನು ಚಾಣಾಕ್ಷತನದಿಂದ ನಿರ್ವಹಿಸುತ್ತಾ ಅನುಭವ ಮಂಟಪದಲ್ಲಿ ಅನುಭಾವದ ನುಡಿಗಳನ್ನಾಡಿ ಚರ್ಚೆಯಲ್ಲಿ ಭಾಗಿಯಾಗಿ ಮಾರ್ಗದರ್ಶಕರಾಗಿ ಎಲ್ಲರನ್ನು ಮುನ್ನಡೆಸುತ್ತಿದ್ದರು.

ಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ಒದಗಿದಾಗ ಆತ್ಮಸ್ಥೈರ್ಯವನ್ನು ಮೈಗೂಡಿಸಿಕೊಂಡು ಅನುಭವ ಮಂಟಪದ ಮಹಾಮನೆಯ ಜವಾಬ್ದಾರಿಯನ್ನು ಹೊತ್ತರು.

ಶರಣ ಹಡಪದ ಅಪ್ಪಣ್ಣನವರನ್ನು ಗುರು ಬಸವಣ್ಣನವರು ಪತ್ನಿ ನೀಲಾಂಬಿಕೆಯವರನ್ನು ಕರೆ ತರಲು ಕಲ್ಯಾಣಕ್ಕೆ ಕಳುಹಿಸಿದ್ದರು. ಅವರೊಡನೆ ಬಂದ ನೀಲಾಂಬಿಕಾ ತಾಯಿಯವರು ತಂಗಡಗಿಗೆ ಬಂದಾಗ ಶ್ರಾವಣ ಮಾಸದಲ್ಲಿ ಕೃಷ್ಣಾ-ಮಲಾಪಹಾರಿ ನದಿಗಳು ತುಂಬ ತುಂಬಿ ಹರಿಯುತ್ತಿದ್ದವು. ಅದರಿಂದ ಸಂಗಮಕ್ಕೆ ಹೋಗಲಾಗದೆ ನಿರುಪಾಯರಾಗಿ ತಂಗಡಗಿಯಲ್ಲಿ ಇಷ್ಟಲಿಂಗ ಪೂಜಾ ನಿರತರಾಗಿ ಗುರು ಬಸವಣ್ಣನವರು ಇಚ್ಛಾಮರಣಿಗಳಾಗಿ ಲಿಂಗೈಕ್ಯರಾದುದನ್ನು ತಮ್ಮ ಕರದಿಷ್ಟಲಿಂಗದಲ್ಲಿ ದರ್ಶಿಸಿದರು. ಮರುದಿವಸ ಷಷ್ಠಿಯಂದು ತಾವೂ ಸಹಿತ ಇಚ್ಛಾಮರಣಿಗಳಾಗಿ ಲಿಂಗೈಕ್ಯರಾದರು.

ಇಷ್ಟಲಿಂಗೋಪಾಸನೆ

ವೈಜ್ಞಾನಿಕ ಅರಿವು

ಸನ್ನಿಹಿತನಾಗಿ ಶರಣೆಂಬುವುದು ನಂಬುವುದು, ಜಂಗಮಾರ್ಚನೆಯ ಮಾಟ ಲಿಂಗದೇವನ ಕೂಡುವ ಕೂಟ" ವಿಶ್ವಗುರು ಬಸವಣ್ಣನವರು. ಶಿವನ ಪೂಜೆ ಮಾಡಲಿಕ್ಕೆ ಹೇಳಿಲ್ಲ. ದೇವತಾ ಶಿವನನ್ನು ಹೇಳಿಲ್ಲ. ಶರಣರು ದೇವರಿಗೆ ಶಿವ ಅಂದಿದ್ದಾರಲ್ಲದೆ, ಶಿವನಿಗೆ ದೇವರಂತಾ ಅಂದಿಲ್ಲ.

"ಕೈಲಾಸವೆಂಬುದೊಂದು ಬೆಳ್ಳಿಯ ಬೆಟ್ಟ, ಅಲ್ಲಿದ್ದಾತ ರುದ್ರನೊಬ್ಬ ಆ ಬೆಟ್ಟಕ್ಕೂ ಆ ರುದ್ರಂಗೆಯೂ ಪ್ರಳಯ ಉಂಟೆಂಬುದಕ್ಕೆ ಗುಹೇಶ್ವರಾ ನಿಮ್ಮ ಶರಣ ಬಲ್ಲ" ಶೂನ್ಯ ಪೀಠಾಧೀಶ ಅಲ್ಲಮಪ್ರಭು ದೇವರು. ಕೈಲಾಸದಲ್ಲಿರುವವರೆಲ್ಲ ಹೆಡ್ಡ-ಮೈಗಳ್ಳರು ಕಾಣಿರೊ. ಗಣಪತಿ-ಷಣ್ಮುಖ ಮಕ್ಕಳಂತೆ. ಗಣಪತಿಗೆ ತಂದೆ ಇಲ್ಲ. ಷಣ್ಮುಖನಿಗೆ ತಾಯಿಯಿಲ್ಲವಂತೆ. ಇದು ವೈಜ್ಞಾನಿಕ ಹಾಗೂ ವೈಚಾರಿಕತೆಗೆ ವಿರುದ್ಧವಾದದ್ದು. ಆ ದೇವನನ್ನು ಶೈವರು ಶಿವನ ರೂಪದಲ್ಲಿ ಸ್ಥಾವರಲಿಂಗವನ್ನು ಪೂಜೆ ಮಾಡುತ್ತಾರೆ. ಒಂದು ಮಾತನ್ನು ಜಗತ್ತಿನ ಜನರಿಗೆ ಹೇಳಿದರೆ ಆಶ್ಚರ್ಯವೆನಿಸಬಹುದು. ಪ್ರಾಯಶಃ ಇಡೀ ಜಗತ್ತಿನಲ್ಲಿ ದೇವರ ಪೂಜೆ ಉಪಾಸನೆ ಮಾಡುವಂತೆ ಹೇಳಿದವರು ವಿಶ್ವಗುರು ಬಸವಣ್ಣನವರು ಒಬ್ಬರೆ-ಮಹಾ ಪ್ರಸಾದಿ ಏಕಮೇವ ದ್ವಿತೀಯರು. ಉಪಾಸನೆ ಅಥವಾ ಪೂಜೆ ಮೂರು ರೀತಿ

1. ಮೈಯಿಂದ ಮಾಡುವುದು ಪೂಜೆ
2. ಮಾತಿನಿಂದ ಮಾಡುವುದು ಪ್ರಾರ್ಥನೆ
3. ಮನಸ್ಸಿನಿಂದ ಮಾಡುವುದು ಧ್ಯಾನ.

ಇಲ್ಲಿ ಪೂಜೆಗೆ 33 ಅಂಕ, ಪ್ರಾರ್ಥನೆಗೆ 33 ಅಂಕ ಮತ್ತು ಧ್ಯಾನಕ್ಕೆ 33 ಅಂಕ. ಭಕ್ತಿ, ಶ್ರದ್ಧೆ, ನಿಷ್ಠೆ ಶರಣಾಗತಿಯಿಂದ ಮಾಡಿದರೆ 1 ಹೆಚ್ಚುವರಿ ಮಾರ್ಕ್ ನೂರಕ್ಕೆ ನೂರರಷ್ಟು ಅಂಕಗಳನ್ನು ತೆಗೆದುಕೊಂಡು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವವರು.

ಮುಂದುವರಿಯುವುದು...





ಬೆಂಗಳೂರಿನಲ್ಲಿ
ಬಸವೋತ್ಸವ
ಸುಮಧುರ
ಕ್ಷಣಗಳು









ಬೆಂಗಳೂರಿನಲ್ಲಿ
ಬಸವೋತ್ಸವ
ಸುಮಧುರ
ಕ್ಷಣಗಳು

ಪರಸ್ತ್ರೀ?!



ವಚನವಾಣಿ

ಮಾತೆ ಕಸ್ತೂರಿದೇವಿ

ನೋಡಲಾಗದು ನುಡಿಸಲಾಗದು ಪರಸ್ತ್ರೀಯ, ಬೇಡ ಕಾಣಿರೋ.
ತಗರ ಬೆನ್ನಲಿ ಹರಿವ ಸೊಣಗನಂತೆ, ಬೇಡ ಕಾಣಿರೋ.
ಒಂದಾಸೆಗೆ ಸಾಸಿರ ವರುಷ ನರಕದಲದ್ದುವ ಲಿಂಗದೇವ.

–ಸಮಾಜ ಸುಧಾರಕ ಬಸವಣ್ಣನವರು.

ಅದೊಂದು ಅಷ್ಟೇನು ಜನನಿಬಿಡವಿಲ್ಲದ ಮದ್ಯಾಹ್ನದ ರಸ್ತೆ. ಅಲ್ಲಿ ಬೆಳಿಗ್ಗೆ ಮತ್ತು ಸಂಜೆ ಮಾತ್ರ ಜನದಟ್ಟಣೆ ಇರುತ್ತಿತ್ತು. ಅಂಥ ರಸ್ತೆಯಲ್ಲಿ ಅಣ್ಣ–ತಂಗಿಯರಿಬ್ಬರು ಸ್ಕೂಟರಿನಲ್ಲಿ ಹೊರಟಿದ್ದರು. ನಡುರಸ್ತೆಯಲ್ಲಿ ಅಪರೂಪಕ್ಕೆ ಮತ್ತು ಅಕಸ್ಮಿಕವಾಗಿ ಸಿಕ್ಕ ತನ್ನ ಹಳೆ ಸ್ನೇಹಿತರೊಂದಿಗೆ ಅಣ್ಣ ರಸ್ತೆಬದಿಗೆ ಸ್ಕೂಟರನ್ನು ನಿಲ್ಲಿಸಿ ಮಾತಿಗೆ ನಿಂತ. ತಂಗಿ ಗುಂಪಿನಿಂದ ಸ್ವಲ್ಪದೂರ ನಿಂತು ಮೊಬೈಲಿನಲ್ಲಿ ಮಗ್ನಳಾದಳು. ಅಷ್ಟರಲ್ಲಿ ಅದೇ ರಸ್ತೆಯಲ್ಲಿ ತನ್ನ ಬೆಳಗಿನ ಪಾಳಿ ಕೆಲಸ ಮುಗಿಸಿ ಮನೆಗೆ ಹಿಂದಿರುಗುತ್ತಿದ್ದ ಒಬ್ಬ ಕಾರ್ಮಿಕನ ಕಣ್ಣು ಆ ಹೆಣ್ಣುಮಗಳ ಮೇಲೆ ಬಿತ್ತು. ಗಮನಿಸಿದ. ಜತೆಯಲ್ಲಿ ಯಾರು ಇಲ್ಲ ಎಂದು ಭಾವಿಸಿ ಮೆಲ್ಲಗೆ ಹತ್ತಿರ ಹೋದ. ಹಲ್ಲು ಕಿಸಿದ. ಆಕೆ ಸ್ಪಂದಿಸಲಿಲ್ಲ. ಮತ್ತೂ ಹತ್ತಿರ ಹೋದ. ಅಸಭ್ಯವಾಗಿ ಮಾತಾಡಲು, ಮೈಮುಟ್ಟಲು ಪ್ರಾರಂಭಿಸಿದ. ಅಪರಿಚಿತ ವ್ಯಕ್ತಿಯ ಅನಿರೀಕ್ಷಿತ, ಅಸಭ್ಯ ವರ್ತನೆಯಿಂದ ಗಾಬರಿಗೊಂಡು ಆಕೆ ಜೋರಾಗಿ ಕಿರುಚಿದಳು.



ಪೋಲಿಸರು ಇಂಥ ಬೀದಿ ಕಾಮಣ್ಣಗಳನ್ನು ಸುಮ್ಮನೆ ಬಿಟ್ಟಾರೆಯೇ. ಸ್ಟೇಷನ್ನಿನಲ್ಲಿ ಹಾಕಿಕೊಂಡು ಚನ್ನಾಗಿ ಹೊಡೆದರು. ಕಾಮವಿಕಾರದಿಂದ ಅನುಭವಿಸಿದ ನರಕವನ್ನು, ಕಾಲಿನಲ್ಲಿ ಪೋಲಿಸರು ಮಾಡಿದ ಗಾಯದ ಗುರುತುಗಳನ್ನು ತೋರಿಸುತ್ತಾ ಅವನು ಹೇಳಿಕೊಂಡು ತಿರುಗುವುದು ಹೀಗೆ–"ನೋಡಿ, ನಾನು ಗೃಹಸ್ಥ. ನನಗೂ ಹೆಂಡತಿ ಮಕ್ಕಳು ಇದ್ದಾರೆ. ಹೆಂಡತಿ ತವರಿಗೆ ಹೆರಿಗೆಗೆ ಹೋಗಿದ್ದಾಳೆ. ನಾನು ಹಾಗೆ ಮಾಡಲು ಸಾಧ್ಯವೆ?" ಎಂದು ಎಷ್ಟು ಗೋಳಾಡಿದರೂ ಬಿಡದೆ ಪೋಲಿಸರು ಹೀಗೆ ಸಿಕ್ಕಾಪಟ್ಟೆ ಹೊಡೆದು ಗಾಯ ಮಾಡಿದ್ದಾರೆ ಎಂದು ಮುಖ ಮತ್ತು ಕಾಲುಗಳಲ್ಲಿ ಉಂಟಾಗಿರುವ ಮಾಯದ ಗಾಯದ ದೊಡ್ಡ ಗುರುತುಗಳನ್ನು ತೋರಿಸುತ್ತಾನೆ. ಪಾಪ! ಇಂದಿಗೂ ಆತ ಪ್ರಾಯಶ್ಚಿತ್ತಕ್ಕಾಗಿ ಮತ್ತು ಅಂದು ತನಗಾದ ಆಘಾತದಿಂದ ಚೇತರಿಸಿಕೊಳ್ಳಲು ಅವನು ರಸ್ತೆ ಬದಿಯಲ್ಲಿ ಸಿಗುವ ಪ್ರತಿಯೊಂದು ದೇವಸ್ಥಾನ, ಮಠ, ಮಸೀದಿ, ಚರ್ಚುಗಳಿಗೆ ತಪ್ಪದೆ ದಿನವೂ ಭೇಟಿ ಕೊಟ್ಟು ಮನಶ್ಯಾಂತಿಗಾಗಿ ಪ್ರಾರ್ಥಿಸುತ್ತಾನೆ, ಹಂಬಲಿಸುತ್ತಿದ್ದಾನೆ; ನೆಮ್ಮದಿಯನ್ನು ಹುಡುಕುತ್ತಿದ್ದಾನೆ.

ಗುರು ಬಸವಣ್ಣನವರ ವಾಣಿ 'ಕಣ್ಣು ತಪ್ಪಿ ನೋಡಿದರೆ ಮಾರಿ' ಎಂಬ ವಚನವಾಕ್ಯಕ್ಕೆ ಸಾಕ್ಷಿಯಂತಿರುವ ಈ ದುರ್ಘಟನೆಗೆ ಪೋಷಕವಾಗಿ ಇಂದಿನ ಸಾಮಾಜಿಕ ಪರಿಸರದಲ್ಲಿ ಪರಸ್ತ್ರೀ(ಸತಿ) ಗಮನ ಹೆಚ್ಚಾಗುತ್ತಿರುವುದು ಪ್ರತಿದಿನವೂ ಮಾಧ್ಯಮಗಳಲ್ಲಿ ಸಾಕ್ಷ್ಯಚಿತ್ರಗಳೊಂದಿಗೆ ಪ್ರಚಾರವಾಗುತ್ತಿದೆ. ಹೆಣ್ಣು ಎಂದರೆ ಸಾಕು ಜೊಲ್ಲು ಸೋರಿಸುವ, ಗಾದೆ ಮಾತಿನಂತೆ ಕತ್ತೆಗೆ ಸೀರೆ ಉಡಿಸಿದರೂ ಬಿಡದ ಇಂಥ ಕಾಮುಕರ ಬಗ್ಗೆ ಹೆಣ್ಣುಮಕ್ಕಳಿಗೂ ಸಾಕಷ್ಟು ತಿಳುವಳಿಕೆಯನ್ನು ಕೊಡುವ ಮತ್ತು ಜಾಗೃತಿ ಮೂಡಿಸುವ ಲೇಖನಗಳನ್ನು ಪತ್ರಿಕೆಗಳಲ್ಲಿ, ಕಾರ್ಯಕ್ರಮಗಳನ್ನು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕಾಣಬಹುದು. ಈ ಮಧ್ಯೆ ತಾಯಂದಿರು ತಮ್ಮ ಗಂಡು ಮಕ್ಕಳಿಗೆ ಹೆಣ್ಣುಮಕ್ಕಳನ್ನು ಗೌರವಿಸುವ ಸಂಸ್ಕಾರವನ್ನು ಮನೆಯಿಂದಲೆ ಮೈಗೂಡಿಸಬೇಕೆಂಬ ಆಗ್ರಹ ಸಮಾಜ ನೇತಾರರಿಂದ ಕೇಳಿಬರುತ್ತಿರುವುದು ಸಾಮಾಜಿಕ ಪರಿವರ್ತನೆಗೆ ಹಿಡಿದ ದಾರಿ ಎನ್ನಬಹುದು. ಏಕೆಂದರೆ ಇಂದು ಪುಟ್ಟ ಹೆಣ್ಣುಮಕ್ಕಳನ್ನು ಬಿಡದಷ್ಟೂ ಕಾಮುಕ ವಿಕೃತಿ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂಬುದು ಗಮನಾರ್ಹ. ಈಗಾಗಲೇ ಆಪ್ತಸಮಾಲೋಚಕರು ಪೋಷಕರಿಗೆ ಮನೆಗಳಲ್ಲಿ ಶಾಲೆಗೆ ಹೋಗುವ ತಮ್ಮ ಪುಟ್ಟ ಮುಗ್ಧ ಕಂದಮ್ಮಗಳಿಗೆ ಕೆಟ್ಟ ಮತ್ತು ಒಳ್ಳೆಯ ಸ್ಪರ್ಶದ ಬಗ್ಗೆ ಸ್ಪಷ್ಟ ತಿಳುವಳಿಕೆ ಕೊಡಲು ಸಲಹೆ ನೀಡುತ್ತಿದ್ದಾರೆ.

ಶರಣರ ಅಭಿಮತದಂತೆ ಪಂಚಮಹಾಪಾತಕಗಳಲ್ಲಿ ಒಂದಾದ ಪರಸ್ತ್ರೀ ಗಮನದಿಂದ ಅಗಬಹುದಾದ ಅನಾಹುತಗಳ ಬಗ್ಗೆ ಎಚ್ಚರಿಸುವ, ಅದರಿಂದ ದೂರ ಇರುವ ಮತ್ತು ಸಮಾಜದಲ್ಲಿರಬಹುದಾದ ಸ್ತ್ರೀಬೇಧಗಳ ಬಗೆಗಿನ ಜ್ಞಾನವನ್ನು ಪಸರಿಸುವ ಬಸವಾದಿ ಪ್ರಮಥರ ಸಮಾಜಪರ ಕಾಳಜಿಗೆ ತಲೆಬಾಗುತ್ತಾ ಅಂಥ ಕೆಲವು ವಚನಗಳನ್ನು ಈಗ ಮನನ ಮಾಡೋಣ. ಏಕೆಂದರೆ ಅತಿ ಕೆಟ್ಟ ಪರಿಣಾಮವನ್ನು ಉಂಟುಮಾಡುವ ಉಭಯತರು ಸಾಮಾಜಿಕ ಕಾಮವನ್ನು ಗೆಲ್ಲುವ ಇಂಥ ವಿವರವಾದ ಮತ್ತು ಆಳವಾದ ಬೋಧಾಮೃತವನ್ನು ನಮಗೆ ಬೇರೆ ಯಾರು ಕೊಡಲು ಸಮರ್ಥರೂ ಅಲ್ಲ; ಸಾಧ್ಯವೂ ಇಲ್ಲ ಎಂಬುದನ್ನು ಮನಗಾನೋಣ.

ತಂದೆ ಮಕ್ಕಳಿಗೆ ಬುದ್ಧಿ ಹೇಳಿದಂತೆ ಬಸವತಂದೆಯವರು ಈ ವಚನದಲ್ಲಿ ಹೇಳುತ್ತಿದ್ದಾರೆ. ಪರಸ್ತ್ರೀಯನ್ನು

ನೋಡುವುದಾಗಲಿ, ಮಾತಾಡಿಸುವುದಾಗಲಿ, ಕೆಣಕುವುದಾಗಲಿ, ಚುಡಾಯಿಸುವುದಾಗಲಿ ಮಾಡಬೇಡಿ. ಏಕೆಂದರೆ ಇದು ಹೇಡಿಯಾದ ಗಂಡುಕುರಿಯನ್ನು ನಾಯಿ ಬೆನ್ನಟ್ಟಿದಂತೆ ಆಗುತ್ತದೆ. ಅಂದರೆ ಈ ಅಸಭ್ಯತೆಯಿಂದ ಕೂಡಿದ ಕಾಮುಕ ವರ್ತನೆ ಶೂರತ್ವ ಅಥವಾ ಧೀರತ್ವದ ಲಕ್ಷಣ ಅಲ್ಲ. ಹೆಣ್ಣನ್ನು ರಕ್ಷಿಸುವ ಶಕ್ತಿಯಿಲ್ಲದ ದುರ್ಬಲ ಗಂಡಸರ ಪತ್ನಿಯನ್ನು ಇಲ್ಲಿ ಪರಸ್ತ್ರೀ ಎಂದು ಸಂಭೋದಿಸಿದ್ದಾರೆ. ಪ್ರಕೃತಿಯಲ್ಲಿ ಗೆಂಡುಕುರಿ ಎಷ್ಟೇ ಬಲಿಷ್ಟವಾಗಿರಲಿ ನಾಯಿಯನ್ನು ಕಂಡು ಹೇಡಿಯಂತೆ ಓಡುತ್ತದೆ. ಅದನ್ನು ಮತ್ತಷ್ಟು ಹೆದರಿಸಲು ನಾಯಿ ಅಟ್ಟಿಸಿಕೊಂಡು ಹೋಗುತ್ತದೆ. ದುರ್ಬಲರನ್ನು ಈ ರೀತಿ ಹಿಂಸಿಸುವುದು ಸುಸಂಸ್ಕೃತ ಸಮಾಜದ ಲಕ್ಷಣವಲ್ಲ; ಕ್ರೌರ್ಯದ ಪರಮಾವಧಿ ಎಂಬುದು ಈ ವಚನದ ಮತಿಥಾರ್ಥ. ಏಕೆಂದರೆ ಬಲಿಷ್ಟರಾದ ಗಂಡಸರ ರಕ್ಷಣೆಯಲ್ಲಿರುವ ಪತ್ನಿಯರನ್ನು ಕೆಣಕುವ ಧೈರ್ಯ ಇಂಥ ಕಾಮುಕರಿಗೆ ಇರುವುದಿಲ್ಲ.

ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗಂಜೆ, ಒಂದಕ್ಕಂಜುವೆ, ಒಂದಕ್ಕಳುಕುವೆ ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ. ಮುನ್ನಂಜದ ರಾವಣನೇ ವಿಧಿಯಾದ !
ಅಂಜುವೆನಯ್ಯಾ ಲಿಂಗದೇವಾ.

ಇದು ಗುರು ಬಸವಣ್ಣನವರು ಸಮಾಜವನ್ನು ಎಚ್ಚರಿಸುತ್ತಿರುವ ಮತ್ತೊಂದು ಅಮೂಲ್ಯ ವಚನ. ಹಾವು ವಿಷಪೂರಿತ ಪ್ರಾಣಿ. ಆದರೂ ಇದನ್ನು ಕಂಡು ಭಯಪಡುವ ಕಾರಣವಿಲ್ಲ. ಏಕೆಂದರೆ ಇದರಿಂದ ಕಚ್ಚಿಸಿಕೊಂಡು ಸತ್ತರೂ ದೇಹ ನಾಶವಾಗುವುದೇ ವಿನಾ ಅಪಕೀರ್ತಿ ಬರುವುದಿಲ್ಲ ಅಲ್ಲದೆ ಅತ್ಮವೂ ಮಲಿನವಾಗುವುದಿಲ್ಲ. ಈಗಂತೂ ಹಾವು ಹಿಡಿಯುವ ಕಲೆಯಲ್ಲಿ ಬಲಿದರಾದ ಸರ್ಪತಜ್ಞರಿರುವ ಕಾರಣ ಹರಿಯುವ ಹಾವಿಗೂ ಅಂಜಬೇಕಾಗಿಲ್ಲ. ಏಕೆಂದರೆ ಅವರು ಅದನ್ನು ಹಿಡಿದು ಸುರಕ್ಷಿತವಾಗಿ ಕಾಡಿಗೆ ಬಿಡುವುದನ್ನು ಕಾಣುತ್ತಿದ್ದೇವೆ. ಅದರಂತೆ ಉರಿಯುತ್ತಿರುವ ಬೆಂಕಿಗೂ ಅಂಜಬೇಕಾಗಿಲ್ಲ. ಅದರಲ್ಲಿ ಹಾದು ಬಂದರೂ ದೇಹ ಸುಡಬಹುದೇ ವಿನಾ ಮತ್ತೇನು ಹೆಚ್ಚಿನ ಕೆಡುಕಾಗಲು ಸಾಧ್ಯವಿಲ್ಲ. ಅಲ್ಲದೆ ಈಗಿನ ವೈಜ್ಞಾನಿಕ ಯುಗದಲ್ಲಿ ಬೆಂಕಿಯನ್ನು ನಂದಿಸುವ ಮತ್ತು ಪಾರುಮಾಡುವ ಮುನ್ನೆಚ್ಚರಿಕೆಯ ಸಾಧನಗಳು ಬಳಕೆಯಲ್ಲಿರುವ ಕಾರಣದಿಂದಲೂ ಅಂಜುವ ಅಗತ್ಯವಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಹಾಗೆಯೆ ಸುರಗಿಯ ಮೊನೆ ಅಂದರೆ ಕತ್ತಿಯ ಮೊನೆಗೂ ಹೆದರುವುದು ಈ ವಚನದ ದೃಷ್ಟಿಯಿಂದ ಅಷ್ಟೇನೂ ಪ್ರಾಮುಖ್ಯ ಪಡೆಯುತ್ತಿಲ್ಲ.

ಏಕೆಂದರೆ ಚೂಪಾದ ಕತ್ತಿಯಿಂದ ಆಳವಾದ ಗಾಯ ಆಗಬಹುದು ಅಥವ ಸಾವು ಸಂಭವಿಸಬಹುದು. ಗಾಯವಾದರೆ ವಾಸಿ ಮಾಡಬಹುದು; ಯುದ್ಧದಲ್ಲಿ ಸತ್ತರೆ ವೀರ ಸ್ವರ್ಗ ಪಡೆಯಬಹುದು. ಆದ್ದ-ರಿಂದ ಇಂಥ ಅವಘಡಗಳಿಗೆ ಅಂಜುವ ಪ್ರವೃತ್ತಿಗಿಂತಲೂ 'ಪರಸ್ತ್ರೀ ಪರಧನವೆಂಬಿ ಜೂಬಿಂಗಂಜುವೆ' ಎಂಬ ಗುರುವಿನ ವಾಣಿಯಂತೆ ಇಹಪರಗಳನ್ನು ಕಳಂಕಿತ ಮಾಡುವ ಪರಸ್ತ್ರೀ ಪರಧನದ ಬಗ್ಗೆ ನೈತಿಕ-ಸಾತ್ವಿಕ ಭಯ ಬೆಳೆಸಿಕೊಳ್ಳುವುದು ಇಲ್ಲಿ ಬಹು ಮುಖ್ಯವಾಗಿದೆ. ಏಕೆಂದರೆ ಕೆಟ್ಟ ಧೈರ್ಯದಿಂದ ಇಹದಲ್ಲಿ ಅಪಕೀರ್ತಿ ಪರದಲ್ಲಿ ನರಕ ಪ್ರಾಪ್ತಿಯಾಗುವುದು ತಪ್ಪುವುದಿಲ್ಲ. ರಾವಣನು ತನ್ನಲ್ಲಿ ಸಾಕಷ್ಟು ಬುದ್ಧಿ, ಶಕ್ತಿ, ವಿದ್ಯೆ, ಭಕ್ತಿ, ರಾಜ್ಯ, ಪ್ರತಿಭೆ ಎಲ್ಲಾ ಇದ್ದರೂ ಪರಸ್ತ್ರೀ(ಸೀತೆ)ಯ ಅಪಹರಣದಿಂದ ಕಳಂಕಿತನಾಗಿ ಶಾಶ್ವತವಾದ ಅಪಕೀರ್ತಿಗೆ ಪಾತ್ರನಾದ. ಆದ್ದರಿಂದ ಸಾಮಾಜಿಕ ಭಯ ನಮ್ಮನ್ನು ಪರಸ್ತ್ರೀ ಮತ್ತು ಪರಧನದಿಂದ ಉಂಟಾಗುವ ಆಪತ್ತಿನಿಂದ ಕಾಪಾಡುತ್ತದೆ. ಹಾವು, ಬೆಂಕಿ, ಕತ್ತಿಯಿಂದ ಆಗುವ ಅಪಾಯಗಳಿಗಿಂತಲೂ ದೊಡ್ಡದಾದ ಆಪತ್ತು ಪರಸ್ತ್ರೀ-ಪರಧನದಿಂದ ಒದಗುತ್ತದೆ. ಇಂಥ ಆಪತ್ತುಗಳಿಂದ ರಕ್ಷಿಸಿಕೊಳ್ಳಲು ಭಕ್ತನಿಗೆ ಸಾತ್ವಿಕ ಭಯ ಬಹು ಮುಖ್ಯ ಎಂದು ಬಸವಣ್ಣನವರು ಪರಸ್ತ್ರೀ ಪರಧನದ

ವಿರುದ್ಧ ಸಿಡಿದು ನಿಂತಿದ್ದಾರೆ. ವ್ಯಕ್ತಿತ್ವ ವಿಕಾಸಕ್ಕೆ ಧಕ್ಕೆ ತರುವ ಪರಸ್ತ್ರೀ ಗಮನ ಅಪಾಯ ಎಂದೆ ನೀತಿಶಾಸ್ತ್ರವೂ ಪ್ರತಿಪಾದಿಸುತ್ತದೆ.

ಪರಸ್ತ್ರೀ ಅಥವ ಪರಸತಿಯ ಬಗ್ಗೆ ಬಸವಾದಿ ಪ್ರಮಥರ ನಿಲುವನ್ನು ಅವರ ಮಾತುಗಳಲ್ಲಿ ಕೇಳೋಣ:

- **ಪರಧನ ಪರಸತಿಯಾಸೆಯುಳ್ಳನ್ನಬರ ಮಹೇಶ್ವರನಲ್ಲ-ಚಿನ್ಮಯಜ್ಞಾನಿ ಚನ್ನಬಸವಣ್ಣನವರು.**
- **ಪರಧನ ಪರಸತಿಯರಿಗೆ ಅಂಧಕನಾಗಿರಬೇಕು- ಅಲ್ಲಮ ಪ್ರಭುದೇವರು.**
- **ಪರಧನ ಪರಸ್ತ್ರೀ ಪರದೈವಗಳಿಗೆರಗದಿಪ್ಪುದೆ ನೇಮ-ಆದಯ್ಯ ಶರಣರು ಮತ್ತು ಶರಣೆ ಸತ್ಯಕ್ಕ.**
- **ಪರಸ್ತ್ರೀಯರ ಸಂಗ ಪಂಚಮಹಾ ಪಾತಕ-ಹಡಪದ ಅಪ್ಪಣ್ಣ ಶರಣರು.**

ನವತರುಣರು ಸಂದೇಹಿಸಿ ಪ್ರಶ್ನಿಸುವುದುಂಟು! "ನಾವಿನ್ನು ಮದುವೆಯಾಗಿಲ್ಲ. ನಾವು ಪರಸ್ತ್ರೀ ಎಂದು ಯಾರನ್ನು ಪರಿಗಣಿಸಬೇಕು? ಶರಣರ ಬೋಧೆಯಂತೆ ಎಲ್ಲರನ್ನು ಪರಸ್ತ್ರೀ ಅಂದು-ಕೊಂಡರೆ ಮದುವೆ ಆಗುವುದು ಯಾರನ್ನು? ಎಂದು". ನಮ್ಮ ಶರಣರು ಪ್ರಜ್ಞಾವಂತರು. ಪರಸ್ತ್ರೀ ಪರಿಕಲ್ಪನೆಯನ್ನು ಪ್ರಬಲವಾಗಿ ಪ್ರತಿಪಾದಿಸುವ ಇವರು ಇಂಥ ಸಮಸ್ಯೆಯ ಬಗ್ಗೆಯೂ ಚಿಂತಿಸಿ ತಮ್ಮ ವಚನದಲ್ಲಿ ಮಾರ್ಗದರ್ಶನ ಮಾಡದೆ ಬಿಟ್ಟಿಲ್ಲ. ಅಂತೆ-ಯೇ ಷಟಸ್ಥಲಾಚಾರ್ಯ, ಚಿನ್ಮಯಜ್ಞಾನಿ ಚನ್ನಬಸವಣ್ಣನವರ ವಚನ ಸೂಕ್ತಿಯೊಂದನ್ನು ಈಗ ಆಲಿಸೋಣ.

ದಾಸಿ ವೇಶಿ ವಿಧವೆ ಪರಸ್ತ್ರೀ ಚೋರಕನ್ನಿಕೆ ಬಿಡಸ್ತ್ರೀ ಮೊದಲಾದ, ಹಲವು ಪ್ರಕಾರದ ರಾಶಿಕೊಟದ ಸ್ತ್ರೀಯರ ಬಿಟ್ಟು ಶುದ್ಧಕನ್ಯೆಯ ಭಕ್ತಗಣ ಸಾಕ್ಷಿಯಾಗಿ ವಿಭೂತಿಪಟ್ಟ ಪಾಣಿಗ್ರಹಣ, ಏಕಪ್ರಸಾದಭುಕ್ತನಾಗಿ ಭಕ್ತಿಕಲ್ಯಾಣವಾಗಿ ಸತ್ಯಸದಾಚಾರದಲ್ಲಿ ವರ್ತಿಸುವ, ಭಕ್ತಾರಾದ್ಯರಿಗೆ_ ಗುರುವುಂಟು ಲಿಂಗವುಂಟು ಜಂಗಮವುಂಟು ಪಾದೋದಕವುಂಟು ಪ್ರಸಾದವುಂಟು; ಆತಂಗೆ ನಿಜಮೋಕ್ಷವುಂಟು.

ಸಮಾಜದಲ್ಲಿ ಹಿಂದೆಯೂ, ಈಗಲೂ, ಮುಂದೆಯೂ ಕಂಡುಬರುವ ಸುಮಾರು ಆರು ಪ್ರಕಾರದ ಸ್ತ್ರೀಯರನ್ನು ಚನ್ನಬಸವಣ್ಣನವರು ಗುರುತಿಸುತ್ತಾರೆ. ಅವರು ಯಾರೆಂದರೆ ಮೊದಲನೆಯದು ದಾಸಿ ಅಥವಾ ಕೆಲಸಕ್ಕಿರುವ ಹೆಣ್ಣಾಳು, ಎರಡನೆಯದಾಗಿ ವೇಶ್ಯೆ, ಮೂರನೆಯದಾಗಿ ವಿಧವೆ ಅಂದರೆ ಗಂಡ ಸತ್ತವಳು, ನಾಲ್ಕನೆಯದು ಪತಿಯಿಂದ ಪರಿತ್ಯಕ್ತಳಾದವಳು(ಗಂಡನಿಂದ ದೂರವಾದವಳು), ಐದನೆಯದು ಮದುವೆಯಾದವಳು ಕೊನೆಯದು ಚೋರಸ್ತ್ರೀ ಅಂದರೆ ಕಳ್ಳಿ- ಹೀಗೆ ಆರು ವರ್ಗವನ್ನು ಮಾಡಿದ್ದಾರೆ. ಇವರ ಸಂಗ ಮಾಡುವುದು ಭಕ್ತನಾದವನಿಗೆ ಯೋಗ್ಯವಲ್ಲ. ಗೃಹಸ್ಥನಾಗಬಯಸುವವನು ಶುದ್ಧಕನ್ಯಾ ಸ್ತ್ರೀಯನ್ನು ವರಿಸಿ ಗುರುಲಿಂಗಜಂಗಮ ಸಾಕ್ಷಿಯಾಗಿ ವಿವಾಹವಾಗಿ, ಸತ್ಯಸದಾಚಾರ ಸಂಪನ್ನನಾಗಿ ವರ್ತಿಸಬೇಕೆಂದು ಅಪ್ಪಣೆ ಕೊಡಿಸಿದ್ದಾರೆ.

ಸಾಮಾಜಿಕ ಪಿಡುಗುಗಳಲ್ಲಿ ಒಂದಾದ ಪರಸ್ತ್ರೀ ಗಮನವನ್ನು ಸಾಮಾನ್ಯವಾಗಿ ಎಲ್ಲಾ ವರ್ಗದ ಶರಣರು ತಮ್ಮ ವಚನಗಳಲ್ಲಿ ಉಗ್ರವಾಗಿ ಖಂಡಿಸಿದ್ದಾರೆ. ಅದರಲ್ಲಿ ಗುರು ಬಸವಣ್ಣನವರಿಗೆ ಆಪ್ತರಾದ ಹಡಪದ ಅಪ್ಪಣ್ಣನವರು ತಮ್ಮ ವಚನದಲ್ಲಿ ಹೀಗೆ ಹೇಳುತ್ತಾರೆ:

ದಾಸಿಯ ಸಂಗ ಎರಡನೆಯ ಪಾತಕ, ವೇಶಿಯ ಸಂಗ ಮೂರನೆಯ ಪಾತಕ. ಮೀಸಲಳಿದ ಪರಸ್ತ್ರೀಯರ ಸಂಗ ಪಂಚಮಹಾಪಾತಕ. ಇನಿಸು ಶಿವಭಕ್ತರಿಗೆ ಸಲ್ಲವು. ಇವನರಿದರಿದು ಮಾಡಿದನಾದರೆ, ಯಮಪಟ್ಟಣವೆ ವಾಸವಾಗಿಪ್ಪರಲ್ಲದೆ, ಈ ದೇಶಕ್ಕೆ ಮರಳಿ ಬರಲಿಲ್ಲ ನೋಡಾ, ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಮನೆ ಅಥವಾ ಜಮೀನುಗಳಲ್ಲಿ ಹೊಟ್ಟೆ ಪಾಡಿಗಾಗಿ ದುಡಿಯುವ ಹೆಣ್ಣಾಳುಗಳನ್ನು ಕಾಮದೃಷ್ಟಿಯಿಂದ ನೋಡುವುದು ಲಿಂಗಭಕ್ತನಾದವನಿಗೆ ಶೋಭೆಯಲ್ಲ. ಅದರಂತೆ ವೇಶ್ಯೆಯರ ಮತ್ತು ಅನ್ಯಸ್ತ್ರೀಯರ

ಸಂಗವೂ ಪುರುಷ ವ್ಯಕ್ತಿತ್ವಕ್ಕೆ ಮಾರಕ ಎಂದು ಹಡಪದ ಅಪ್ಪಣ್ಣನವರು ಉಪದೇಶಿಸುತ್ತಿದ್ದಾರೆ. ಇಷ್ಟೆಲ್ಲಾ ಹೇಳಿದರೂ ತಿದ್ದಿಕೊಳ್ಳದವರನ್ನು ಪರಮಾತ್ಮನು ಯಮನಗರಿಯಲ್ಲಿಟ್ಟು ನಿರಂತರವಾಗಿ ಶಿಕ್ಷಿಸುತ್ತಾನೆ ಎಂದು ನೈತಿಕ ಭಯ ಬಿತ್ತುವ ಮೂಲಕ ತಿಳಿ ಹೇಳುವ ಪ್ರಯತ್ನ ಈ ವಚನದಲ್ಲಿದೆ. ಸುಸಂಸ್ಕಾರವನ್ನು ಬಿತ್ತಲು ಯೋಗ್ಯನಾದ ಸದ್ಗುರುವಿನಿಂದ ಮಾತ್ರ ಸಾಧ್ಯ ಎಂಬುದನ್ನು ಜೋದರ ಮಾಯಣ್ಣ ಶರಣರು ನುಡಿಯುತ್ತಿದ್ದಾರೆ.

ಮುನ್ನ ಪರಸತಿ ಪಾರ್ವತಿಯೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.
ಬಳಿಕ ಎನ್ನ ಶರಣಸತಿಯೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.
ಇನ್ನು ಸತಿಯರೆಲ್ಲಾ ಗುರುಸತಿಯರೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.

ಸಮಸ್ತ ಸ್ತ್ರೀಕುಲವೆಲ್ಲವೂ ಪಾರ್ವತಿ ಅಂಶವೆಂದು ಭಾವಿಸಲು ಗುರುವಿನಿಂದ ಕಲಿತೆ. ನಂತರ ಈ ಮಹಾಭಾವದಿಂದ ನಾನು ಅತಿ ಎತ್ತರದ ಸ್ಥಾನದಲ್ಲಿರುವ ಜಗದೊಡೆಯನಾದ ಲಿಂಗಪತಿಗೆ ಶರಣಸತಿಯಾಗಿ ಸಮರ್ಪಣೆಯಾಗುವ ಅರ್ಹತೆ ಪಡೆದೆ. ಅಷ್ಟೇ ಅಲ್ಲ ಉಳಿದ ಸ್ತ್ರೀ ಸಮೂಹವನ್ನೆಲ್ಲ ಜ್ಞಾನದಾನ ಮಾಡುವ ಗುರು ಸಂತತಿಯೆಂದು ಭಾವಿಸಿ ಅದರಂತೆ ನಡೆದು ಧನ್ಯನಾದೆ ಎಂದು ಜೋದರ ಮಾಯಣ್ಣ ಶರಣರು ಜಗತ್ತಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

ಸ್ತ್ರೀಯರಲ್ಲಿ ಗುರುವನ್ನು ಕಾಣಲು ಅಪಾರವಾದ ಹೃದಯ ವೈಶಾಲ್ಯತೆ, ಸಂಸ್ಕಾರ ಬೇಕು. ಇದು ಬಸವಧರ್ಮದಲ್ಲಿ ಮಾತ್ರ ಸಾಧ್ಯ ಎನಿಸುತ್ತದೆ. ಏಕೆಂದರೆ ಹೆಣ್ಣನ್ನು ತಾಯಿಯಾಗಿ, ಪತ್ನಿಯಾಗಿ, ಮಗಳಾಗಿ, ಸ್ನೇಹಿತೆಯಾಗಿ, ಸೋದರಿಯಾಗಿ ನೋಡುವುದು ಸುಲಭ. ಆದರೆ ಗುರುವಾಗಿ ಸ್ವೀಕರಿಸುವುದು ಅಷ್ಟು ಸುಲಭವಲ್ಲ. ಅಂಥ ಕಠಿಣವಾದ ಹೃದಯ ಸಂಸ್ಕಾರ ಬಸವಧರ್ಮಕ್ಕೆ ಮೀಸಲಾಗಿದ್ದು 12ನೆ ಶತಮಾನದಲ್ಲಿ ಅಕ್ಕಮಹಾದೇವಿ ಅಂಥ ಮಹಾ ಸೌಭಾಗ್ಯವನ್ನು ಪಡೆದುದು ಮಾತ್ರವಲ್ಲದೆ ಬಸವಾದಿ ಪ್ರಮಥರು ತಮ್ಮ ನಡೆನುಡಿಯಿಂದ ಜಗತ್ತಿಗೂ ಮಾದರಿಯಾದರು ಎಂಬುದು ಕನ್ನಡನಾಡಿನ ವೈಶಿಷ್ಟ್ಯ ಎಂದರೆ ಸುಳ್ಳಲ್ಲ.

ಆಚಾರ | ಅರಿವು | ಅನುಭಾವ

ಲಿಂಗಾಂಗ ಯೋಗ ಸಾಧನೆ -1



ಪೂಜ್ಯಶ್ರೀ
ಬಸವಪ್ರಭು ಸ್ವಾಮೀಜಿ.



ಬಸವನ ಯೋಗದಿಂ ಹಸನಾಯಿತು ಈ
ಲೋಕ, ಚಂದದಿಂ ಬಸವ ಗತಿ ಎನಲು
ಹಿಂಗುವುದು ಭವವು, ಬಸವಯ್ಯಾ ಬಸವಣ್ಣ
ಶರಣಾರ್ಥಿ ಎನಲು ಬಸವ ಬದುಕಿದೆನಯ್ಯಾ
ಯೋಗಿನಾಥ
(ಸವಸ)

ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ
ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ
ಪ್ರಸಾದವಿಕಾರಿಗೆ ಮನೋವಿಕಾರವೆಂಬುದಿಲ್ಲ
ಇಂತೀ ತ್ರಿವಿಧ ಗುಣವನರಿದಾತನು
ಅಚ್ಚ ಲಿಂಗೈಕ್ಯನು ಕಾಣಾ ಲಿಂಗದೇವಾ.
(ಬವ 790)

ಮಾನವನ ಜೀವನದಲ್ಲಿ ಅತ್ಯಂತ ಸುಮಧುರವಾದ ಕ್ಷಣ, ಸಾರ್ಥಕ ಕ್ಷಣ, ಆಧ್ಯಾತ್ಮವನ್ನು ಆಧ್ಯಾತ್ಮದ ಅನುಭೂತಿಯನ್ನು ಆಧ್ಯಾತ್ಮದ ಅನುಭೂತಿಯ ಅನುಭವವನ್ನು, ಆನಂದವನ್ನು ಪಡೆದುಕೊಳ್ಳುವುದು. ನಮ್ಮ ದೇಹದಲ್ಲಿ ತುಂಬಿರುವ ಆತ್ಮ ಇದು ಅಲ್ಪಭಾವಾಪನ್ನ ಜಗತ್ತನ್ನು ತುಂಬಿರುವ ಪರಮಾತ್ಮ ಅಧಿಕ ಭಾವಾಪನ್ನ. ಈ ಆತ್ಮ ಪರಮಾತ್ಮರನ್ನು ಒಟ್ಟುಗೂಡಿಸುವ ಸಾಧನವೇ ಲಿಂಗ. 'ಯಾವುದರಿಂದ ಈ ಜಗತ್ತು ಹೊರಹೊಮ್ಮಿದೆಯೋ, ಯಾವುದರಿಂದ ಈ ಜಗತ್ ರಕ್ಷಣೆ ಪಡೆಯುತ್ತದೆಯೋ ಕೊನೆಗೆ ಈ ಜಗತ್ ಯಾವುದರ ಗರ್ಭ ಪ್ರವೇಶ ಮಾಡುತ್ತದೆಯೋ ಅದುವೇ ಲಿಂಗ' ಪರಮಾತ್ಮನ ಸಂಬಂಧ ಯಾವುದರಿಂದ ತಿಳಿಯತಕ್ಕದ್ದೋ ಅದು ಸಕೀಲವೆನಿಸುವುದು. ಲಿಂಗ ಇದು ಗುರು ಸಕೀಲದ ಗುರುತು.

'ಲಿ' ಕಾರವೇ ಶೂನ್ಯ ಬಿಂದುವೇ ಲೀಲೆ 'ಗ' ಕಾರವೇ ಚಿತ್ತು. ಈ ತ್ರಿವಿಧದೊಳಗಿದೆ ಲಿಂಗವೆಂಬ ಸಕೀಲ, ಇದರ ಸಂಚವನಾವಾತ ಬಲ್ಲ ಆತನೆ ಲಿಂಗ ಸಂಗಿ, ಇದು ಕಾರಣ ಲಿಂಗಾನುಭವಿಗಳ ಶ್ರೀ ಚರಣಕ್ಕೆ ನಮೋ ನಮೋ ಎಂಬೆ ಕೂಡಲ ಚನ್ನಸಂಗಮದೇವಾ. (ಚಬವ)

ಇಲ್ಲಿ 'ಲಿ' ಕಾರವು ಶೂನ್ಯವೆಂದು, ಬಿಂದುವೆ(ಂ) ಲೀಲೆ ಎಂದು, 'ಗ' ಕಾರವು ಚಿತ್ತುವೆಂದು ಹೆಸರಿಸಿದ್ದಾರೆ. ಹಾಗೆ ಶೂನ್ಯ, ಲೀಲೆ, ಚಿತ್ತು ಇವು ಲಿಂಗದ ನಿಜರೂಪು. ಬ್ರಹ್ಮಾಂಡದಲ್ಲಿ ಚರಾಚರ ಜಗತ್‌ನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿರುವುದೇ ಲಿಂಗ. ಇನ್ನು ಪಿಂಡಾಂಡದಲ್ಲಿ ಕ್ರೀಯಾರೂಪವೆಂದು, ಜ್ಞಾನರೂಪವೆಂದು, ಅನುಭಾವ ರೂಪ ಎಂದು, ನಾದಾತ್ಮಕವೆಂದು ಶರಣರು ಕಂಡುಕೊಂಡಿದ್ದಾರೆ. ಅದನ್ನೆ ದೇವರು ಎಂದು ಹೇಳಿದ್ದಾರೆ. "ಅಣುವಿಂಗೆ ಅಣು ಮಹತ್ತಿಂಗೆ ಮಹತ್ತು ಎನಿಸುವ ಲಿಂಗದೇವನ ಕಂಡೆನಯ್ಯಾ ಎನ್ನ ಕರಸ್ಥಲದಲ್ಲಿ" "ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗವ ತಂದುಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ" ಹೀಗೆ ಹಲವಾರು ಕಡೆ ಶರಣರು ಈ ಲಿಂಗದ ಮಹಿಮೆಯನ್ನು ಕೊಂಡಾಡುತ್ತಾರೆ. ಮಹಾಮಹಿಮರಾದ ಶ್ರೀ ಗುರು ಬಸವಣ್ಣನವರು ಕಂಡು ಹಿಡಿದ ಲಿಂಗ ಇದು ಮಹತ್ತರವಾದ ಅರಿವಿನ ಕುರುಹಾಗಿದೆ. ಬಸವ ಗುರುವಿನ ಉತ್ಕೃಷ್ಟ ಯೋಗದಿಂದ ಸ್ವಸ್ವರೂಪ ಜ್ಞಾನದ ಆಧಿಕ್ಯದಿಂದ ಲಿಂಗದ ಸರ್ವಶ್ರೇಷ್ಟವಾದ ಮಹಿಮೆಯು ನಮಗೆ ಮನವರಿಕೆಯಾಗುತ್ತದೆ.

ಸಾಧಕಾವಸ್ಥೆಗಿಂತ ಪೂರ್ವದಲ್ಲಿ ತನ್ನ ಜ್ಞಾನ ತನಗಿರುವುದಿಲ್ಲ. ಸಾಮಾನ್ಯ ಜ್ಞಾನವಿದ್ದರೂ ಅಸಾಮಾನ್ಯವಾದ ಆತ್ಮಜ್ಞಾನವಿರುವುದಿಲ್ಲ. ಅಜ್ಞಾನ ಆವರಿಸಿರುತ್ತದೆ. ಇದು ತೊಲಗಬೇಕಾದರೆ ಗುರು ಸ್ವರೂಪ ಕರಸ್ಥಲದ ಲಿಂಗಬೇಕು. ಈ ಲಿಂಗದಿಂದ ದೇವನನ್ನು ಬೆರೆಯಬೇಕು. ಆಗ ಆ ಸೃಷ್ಟಿಕರ್ತ ಲಿಂಗದೇವನು ಅನುಗ್ರಹಿಸುತ್ತಾನೆ. ಈ ಲಿಂಗದೇವನು ಸಮಸ್ತ ಜಗತ್ತನ್ನು ಮುನ್ನಡೆಸುವ ಶಕ್ತಿಯಾಗಿದ್ದಾನೆ. ಅಂತಹ ದೇವ ಶಕ್ತಿಯಿಂದ ಸಕಲ ಜೀವಜಂತುಗಳ ಚೈತನ್ಯ ರೂಪವಾಗಿ ಕೆಲಸ ಮಾಡುವ ಆ ಚೈತನ್ಯವೇ ಆತ್ಮವಾಗಿದೆ ಎಂದು ತಿಳಿಯಬಹುದು. "ಯಾವುದನ್ನು ಕೈ ಮುಟ್ಟಲಾರದೊ, ಯಾವುದಿಲ್ಲದಿದ್ದರೆ ಕೈ ಏನನ್ನು ಮುಟ್ಟಲಾರದೋ", ಅದುವೇ ಆತ್ಮ. "ಯಾವುದನ್ನು ಕಣ್ಣು ನೋಡಲಾರದೋ, ಯಾವುದಿಲ್ಲದಿದ್ದರೆ ಕಣ್ಣು ಏನನ್ನು ನೋಡಲಾರದೋ ಅದುವೇ ಆತ್ಮ. ಇಂತಹ ಆತ್ಮವನ್ನು ಪರಮಾತ್ಮನ ಕಡೆಗೆ, ಆ ಪರಮಾತ್ಮನ ದ್ಯಾನಾಂಬುದಿಯಲ್ಲಿ ಲೀನಗೊಳಿಸುವುದೇ ಸಾಧಕ ಜೀವನದ ಪರಮಗುರಿ ಇದುವೇ ಲಿಂಗಾಂಗ ಯೋಗದ ಸಾಧನೆ.

> ***ಓದುಗರಿಗೆ ವಿಶೇಷ ಸೂಚನೆ***
>
> ಕಲ್ಯಾಣ ಕಿರಣ ಮಾಸಪತ್ರಿಕೆಯಲ್ಲಿ ವಿವಾಹ, ನಾಮಕರಣ, ಗೃಹ (ಗುರು)ಪ್ರವೇಶ, ಲಿಂಗೈಕ್ಯ ದಿನಾಚರಣೆ, ಶರಣರ ಹಬ್ಬ ಉತ್ಸವಗಳಿಗೆ ಹಾಗೂ ಇತರ ಯಾವುದೇ ಶುಭಹಾರ್ೈಕೆಗಳನ್ನು ಪ್ರಕಟಿಸಲು ಇಚ್ಛಿಸುತ್ತಿದ್ದೇವೆ. ಹೆಚ್ಚಿನ ಮಾಹಿತಿಗೆ ಕೂಡಲೇ ಸಂಪರ್ಕಿಸಿ:
>
> ಪೂಜ್ಯಶ್ರೀ ಬಸವಕುಮಾರ ಸ್ವಾಮೀಜಿ 9449588669
> ಬಸವ ಮಂಟಪ 080-23131476

ಈ ಆತ್ಮ ದೇಹದಲ್ಲಿದ್ದುಕೊಂಡು ಅನೇಕ ಸುಖ-ದುಃಖ, ನೋವು ನಲಿವು, ಶಾಂತಿ, ನೆಮ್ಮದಿ, ಆನಂದವನ್ನು ಪಡೆದುಕೊಳ್ಳುವ ಕಾರ್ಯದಲ್ಲಿ ಆತ್ಮ ದೇಹಕ್ಕೆ ಸಹಕರಿಸುತ್ತದೆ. ದೇಪ ಆತ್ಮಕ್ಕೆ ಸಹಕರಿಸುತ್ತದೆ. ಹಾಗೆ ನೋಡಿದರೆ, ಆತ್ಮ ಬೇರೆ ದೇಹ ಬೇರೆ ಯಾದರೂ ಇಲ್ಲಿ ಒಂದಾಗಿ ಕೆಲಸ ಮಾಡುತ್ತವೆ. ಅದನ್ನು ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರು ಹೀಗೆ ಹೇಳುತ್ತಾರೆ.

**ಅಪರಿಮಿತದ ಕತ್ತಲೆಯೊಳಗೆ
ವಿಪರೀತದ ಬೆಳಗ ನೋಡಾ
ಕತ್ತಲು ಇದೆ ಬೆಳಗು ಇದೆ
ಆನೆಯು ಇದೆ ಸಿಂಹವು ಇದೆ
ಒಂದಕ್ಕೊಂದು ಅಂಜವು. ಆನೆಯು ಸಿಂಹವು
ಒಂದಾಗಿ ಉಂಬುದ ಕಂಡು
ಬೆರಗಾದೆ ಕಾಣಾ ಗುಹೇಶ್ವರಾ. (ಅವಸ)**

ಅಂದರೆ ಇಲ್ಲಿ ಕತ್ತಲು ದೇಹ; ಬೆಳಕು ಆತ್ಮ. ಇವು ತಮ್ಮ ತಮ್ಮಲ್ಲಿಯೆ ನಾ ಹೆಚ್ಚು ತಾ ಹೆಚ್ಚು ಎಂದು ಹಠ ಸಾಧಿಸುತ್ತವೆ. ಕೊನೆಗೆ ಒಂದಾಗಿ ಕಾರ್ಯ ಮಾಡುತ್ತಿವೆ. ಹಾಗೆಯೇ ಆನೆ ದೇಹ' ಆತ್ಮ ಸಿಂಹ. ಇವು ಪ್ರಾಣಿಗಳು ಒಂದನ್ನು ಕಂಡರೆ ಒಂದಕ್ಕೆ ಆಗದು ಆದರೂ ಸಹಿತ ಕೂಡಿ ಊಟ ಮಾಡುವಂತೆ, ದೇಹ ಆತ್ಮ ಕೂಡಿ ಕರ್ಮಗಳನ್ನು ಎಸಗುತ್ತಿವೆ. ಆತ್ಮನು ದೇಹೆಂದ್ರಿಯಗಳ ಮುಖಾಂತರವಾಗಿ ಕೆಲಸ ಮಾಡುತ್ತಾ ಹೋಗುತ್ತಿದ್ದಾನೆ. ಈ ದೇಹ ಮತ್ತು ಆತ್ಮಗಳು ತಮ್ಮೊಟ್ಟಿಗೆ ಮನಸ್ಸನ್ನು ಸೇರಿಸಿಕೊಂಡಿವೆ; ಅವೇ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಾಗಿವೆ. ಈ ಮೂರನ್ನು ನಿಯಂತ್ರಣ ಮಾಡುವುದೇ ಯೋಗದ ಗುರಿ. ಈ ಮೂರನ್ನು ಕಟ್ಟಿ ಹಾಕುವುದು ಅಷ್ಟು ಸುಲಭವಲ್ಲ ಅದನ್ನು ಷಣ್ಮುಖ ಸ್ವಾಮಿಗಳು ಹೀಗೆ ಹೇಳುತ್ತಾರೆ.

ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ, ಇಂದ್ರೀಯಗಳೆಂಬ ಶಾಖೆ ಶಾಖೆಗೆ ಹಾರಿ, ಭವದತ್ತ ಮುಖಮಾಡಿ ಹರಿಯುತ್ತಿದೆ ನೋಡಾ.ಈ ಮನವೆಂಬ ಮರ್ಕಟನ ನೆನಹೆವೆಂಬ ಪಾಶದಲ್ಲಿ ಕಟ್ಟಿ ಉಳಿಹಿಕೊಳ್ಳಾ ಅಖಂಡೇಶ್ವರಾ. (ಸವಸ)

ನಿಜ ಮನಸ್ಸು ಬಹಳ ವಿಕಾರಿ ಹೌದು. ಇದೇ ಮನಸ್ಸನ್ನು ಅಂತರ್‌ಮುಖಿಗೊಳಿಸಿದಾಗ ಅದೇ ಮನಸ್ಸು ಆನಂದವನ್ನುಂಟುಮಾಡುವ ಸಾಧನವೂ ಅಹುದು. ನಾವು ಈ ಧ್ಯಾನ, ತ್ರಾಟಕ ಮಾಡುವಾಗ ಅಲ್ಪ ತೃಪ್ತಿಗಾಗಿ ಮಾಡದೇ ಪರಿಪೂರ್ಣ ಆನಂದಕ್ಕಾಗಿ, ಆ ಪರಮಾತ್ಮನ ದಿವ್ಯಾಮೃತವನ್ನು ಸವಿಯಲಿಕ್ಕಾಗಿ, ಸರ್ವಸಿದ್ಧಿಯನ್ನು ಪಡೆದುಕೊಳ್ಳಲಿಕ್ಕೆ ಮಾಡಬೇಕು. ಮನಸ್ಸಿಗೆ ದೇವ ಮಂತ್ರವಾದ 'ಓಂ ಲಿಂಗಾಯ ನಮಃ' ಅಳವಡಿಸಬೇಕು. ಮಂತ್ರಕ್ಕೆ ಮನಸ್ಸು ಎಡೆ ಮಾಡಿಕೊಡಬೇಕು. ಅಂದಾಗ ಮಾತ್ರ ಯೋಗಿಯಲ್ಲಿ ಆರೋಗ್ಯ ವೃದ್ಧಿ ಯಾಗುತ್ತೆ, ಆಯುಷ್ಯಯೂ ವೃದ್ಧಿಯಾಗುತ್ತದೆ. ಸಾಧನೆ ಮಾಡುವಾಗ ಮನಸ್ಸು ಬಹಳ ನಿರಾಳವಾಗಿಯೂ, ಅದು ಕಲ್ಮಶ ಮುಕ್ತವಾಗಿಯೂ ಇರಬೇಕು. ಹೀಗೆ ನಿಶ್ಕಲ್ಮಶವಾದ ಭಾವನೆಯಿಂದ ಸಾಧಿಸಲು ತೊಡಗಬೇಕು.

ನಮ್ಮ ಕೈಯಲ್ಲಿರುವ ಇಷ್ಟಲಿಂಗವು ಇದು ಹೆಬ್ಬಟ್ಟಿನಷ್ಟು ಗಾತ್ರ ಹೊಂದಿರಬೇಕು. ಪೂಜೆಗೆ ಕುಳಿತ ನಾವು ಎಡ ಅಂಗೈಯಲ್ಲಿ ಲಿಂಗವನ್ನು ಇಟ್ಟುಕೊಳ್ಳಬೇಕು. ಒಂದು ಅಡಿ ಅಂತರದಲ್ಲಿ ನಮ್ಮ ಕಣ್ಣಿನಿಂದ ದೂರವಿರಬೇಕು. ಬಲಗಡೆ ಭುಜದ ಹಿಂದೆ ದೀಪ ಇಟ್ಟುಕೊಂಡು ಆ ದೀಪದ ಕಿರಣಗಳು ಲಿಂಗದಲ್ಲಿ ಬೀಳಬೇಕು ಕಾರಣವೇನೆಂದರೆ, ನಮ್ಮ ಮಿದುಳಿನ ಮಧ್ಯಭಾಗದಲ್ಲಿರುವ 10 ರಿಂದ 400 ಮೈಕ್ರೊವೋಲ್ಟ್ ಇರುವ ಶಕ್ತಿ ಕಣ್ಣಿನ ಮೂಲಕ ಒಂದು ಅಡಿ ಅಂತರದಲ್ಲಿ ಬರುತ್ತದೆ. ಅದಕ್ಕಾಗಿ ನಾವು ವಿಶ್ವ ಚೇತನವನ್ನು ಕಣ್ಣಿನ ಮೂಲಕವಾಗಿಯೇ ಲಿಂಗದಿಂದ ತೆಗೆದುಕೊಂಡು ಮೂರನೇ ಕಣ್ಣೆಂದು ಪ್ರಸಿದ್ಧವಾಗಿರುವ 'ಪೀನಿಯಲ್ ಬಾಡಿ' ತಲುಪಿ ಅಲ್ಲಿ 'ಮೆಲೆಟಾನಿನ್' ಪ್ರಮಾಣವನ್ನು ಹೆಚ್ಚಿಸಲಾಗಿತ್ತದೆ. ವಿಜ್ಞಾನಿಗಳ ಪ್ರಕಾರ ಹೊರಗಿನ ಎರಡು ಕಣ್ಣಿನ ನರಗಳು ನೇರವಾಗಿ ಮೂರನೆಯ ಕಣ್ಣೆನಿಸುವ ಪೀನಿಯಲ್ ಗ್ರಂಥಿಗೆ ತಲುಪಿರುತ್ತದೆ ಎಂದಿದ್ದಾರೆ.

ಇಲ್ಲಿ 10 ರಿಂದ 400 ಮೈಕ್ರೊವೋಲ್ಟ್ ಶಕ್ತಿ ಇರುತ್ತದೆ. ಅದು ದೇಹದ ಕಾರ್ಯ ನಡೆಯುವುದರಿಂದ ವ್ಯಯವಾಗುತ್ತಿರುತ್ತದೆ. ಅದರ ಮೇಲೆ ಪಿಯಾಮೀಟರ್ ಡ್ಯೂರಾಮೀಟರ್, ಅರ್ಕನಾಯ್ಡ್ ಎಂಬ ತೆಳ್ಳನೆಯ ಪೊರೆ ಇರುವುದರಿಂದ ಅವುಗಳಲ್ಲಿ ರೋಗ ನಿರೋಧಕ ಶಕ್ತಿ ಕಣಗಳ ರಸವಿರುವುದರಿಂದ ಹಾಗೂ ಆ ಶಕ್ತಿ ನರಗಳ ಮೇಲೆ 'ಮಯೋಲಿನ್' ಕವಚವಿರುವುದರಿಂದ ವಿಶ್ವಚೈತನ್ಯವನ್ನು ನಮ್ಮ ಮೆದುಳಿನ

ಮಧ್ಯಭಾಗಕ್ಕೆ ಕಳುಹಿಸಬೇಕಾದರೆ, ಕಣ್ಣೊಂದೆ ಹಾದಿಯಾಗಿರುತ್ತದೆ. ಈ ವೈಜ್ಞಾನಿಕ ಸತ್ಯವನ್ನು ಶರಣೆ ಮೋಳಿಗೆ ಮಹಾದೇವಿಯವರು ಸಾವಿರ ವರ್ಷದ ಹಿಂದೆಯೇ ತಮ್ಮ ವಚನದಲ್ಲಿ ತಿಳಿಸಿದ್ದಾರೆ.

ಅಂಗದಲ್ಲಿ ಲಿಂಗ ವೇಧಿಸಿ ಪ್ರಾಣಕ್ಕೆ
ಸಂಬಂಧವ ಮಾಡಬೇಕೆಂಬಲ್ಲಿ
ಅಂಗಕ್ಕೂ-ಪ್ರಾಣಕ್ಕೂ ಲಿಂಗ ವೇಧಿಸುವುದಕ್ಕೆ
ಹಾದಿಯ ಹೊಲಬು ಅದಾವ ಠಾವಿನಲ್ಲಿ
ವೇಧಿಸುವುದು ಹೇಳಯ್ಯಾ?
ಆ ಅಂಗ ನೀರ ಬಾಗಿಲ ನೆಲನೆ, ಮಳೆಯ
ಸವರಿನ ಹಾದಿಯೆ,
ಹೋಹ ಹೊಲಬಿನ ಪಥವೆ?
ಈ ಅಪ್ರಮಾಣಪ್ಪ ಲಿಂಗವ ಚಿತ್ತದ
ಭೇದದಿಂದರಿತು ಆತ್ಮನ ದೃಷ್ಟಿಯಲ್ಲಿ ಲಕ್ಷಿಸಿ
ಇದಿರಿಟ್ಟು ಕರದ ಇಷ್ಟದಲ್ಲಿ ನಿರೀಕ್ಷಣೆಯಿಂದ
ನಿಜವಸ್ತುವ ನಿಕ್ಷೇಪಿಸಿ ಬೈಚಿಟ್ಟಲ್ಲಿ ಅಂಗಕ್ಕೂ
ಪ್ರಾಣಕ್ಕೂ ಬೇರೆಡೆ ಲಿಂಗವಿಪ್ಪುದೆರಡಿಲ್ಲ.
ಇದು ಕ್ರೀಯಾಲೇಪ ಸ್ಥಲ; ಇದು ಸದ್ಭಾವ
ಸಂಬಂಧ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ
ಮಲ್ಲಿಕಾರ್ಜುನನಲ್ಲಿ

ಅದೇ ರೀತಿಯಾಗಿ ಮೆಲಾಟಾನಿನ್ (ಅಮೃತ) ಬಿಡುವ ವಿಧಾನವನ್ನು ಅದರ ಪರಿಣಾಮವನ್ನು ಹಡಪದ ಲಿಂಗಮ್ಮ ತಾಯಿಯವರು ಸಹಿತ ತಮ್ಮ ವಚನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಆಧಾರವ ಬಲಿಯೇ ಬೇಗೆವರಿಯಿತ್ತು
ಕಿಚ್ಚು ಆವರಿಸಿ ಊರ್ಧ್ವಕ್ಕೇರಿತ್ತು
ಸಾಸಿರದಳದ ಅಮೃತದ ಕೊಡ ಕಾಯ್ದಿತ್ತು,
ಕಾಯ್ದ ಅಮೃತ ಉಕ್ಕಿ ತೊಟ್ಟಿಕ್ಕಿ,
ಅಮೃತವನುಂಡು; ಹಸಿವು ಕೆಟ್ಟಿತ್ತು;
ತೃಷೆಯಡಗಿತ್ತು; ನಿದ್ರೆಯರಿತಿತ್ತು;
ಅಂಗಗುಣವಳಿಯಿತ್ತು; ಲಿಂಗಗುಣ ನಿಂದಿತ್ತು;
ಸಂಗಸುಖ ಹಿಂಗಿತ್ತು;
ಅಂಗ ಲಿಂಗವೆಂಬ ಉಭಯವಳಿದು;
ಮಂಗಳ ಮಹಾಬೆಳಗಿನಲ್ಲಿಯೇ ಓಲಾಡಿ
ಸುಖಿಯಾದೆನಯ್ಯಾ ಅಪ್ಪಣ್ಣ ಪ್ರಿಯ
ಚೆನ್ನಬಸವಣ್ಣಾ" (ಸವಸ)

ಹೀಗೆ ಲಿಂಗ ಸಾಧನೆಯಿಂದ 'ಮೆಲಾಟಾನಿನ್' ಪ್ರಭಾವವು ದೇಹ

ಚುಟುಕು ಆರೋಗ್ಯ

ಹೆಚ್ಚು,ಕಡಿಮೆ ನಿದ್ದೆ ಮಧುಮೇಹಕ್ಕೆ ರಹದಾರಿ

ಸರಾಸರಿ ಅವಧಿಗಿಂತ ಹೆಚ್ಚು ಅಥವಾ ಕಡಿಮೆ ಹೊತ್ತು ನಿದ್ದೆ ಮಾಡುವುದರಿಂದ ಸಕ್ಕರೆ ಕಾಯಿಲೆ ಬರುವ ಸಾಧ್ಯತೆಯಿದೆ ಎಂದು ಅಧ್ಯಯನವೊಂದರಿಂದ ತಿಳಿದು ಬಂದಿದೆ. ಇಂದು ವಿಶ್ವದಾದ್ಯಂತ ಸುಮಾರು 29 ದಶಲಕ್ಷ ಜನ ಮಧುಮೇಹದಿಂದ ಬಳಲುತ್ತಿದ್ದಾರೆ ಎಂದು ಎಂಡೋ ಸೊಸೈಟಿ ಅಂಕಿ ಅಂಶ ತಿಳಿಸುತ್ತದೆ. ಕಳೆದ 50 ವರ್ಷಗಳಲ್ಲಿ ವ್ಯಕ್ತಿಗಳ ಸರಾಸರಿ ನಿದ್ದೆ ಅವಧಿ ಸುಮಾರು 2 ಗಂಟೆಯವರೆಗೆ ಕಡಿಮೆಯಾಗಿದೆ ಎನ್ನುತ್ತಾರೆ ಹಿರಿಯ ಲೇಖಕ ಫೆಮ್ಕೆ. ಇದರೊಟ್ಟಿಗೆ ಮಧುಮೇಹಿಗಳ ಸಂಖ್ಯೆ ಜಾಸ್ತಿಯಾಗಿದೆಯಂತೆ. ಅಧ್ಯಯನಕ್ಕಾಗಿ ಸುಮಾರು 800 ಆರೋಗ್ಯ ವ್ಯಕ್ತಿಗಳನ್ನು ಒಳಪಡಿಸಲಾಯಿತಂತೆ. ಪುರುಷರಲ್ಲಿ ಅಧಿಕ ಮತ್ತು ಕಡಿಮೆ ನಿದ್ದೆ ಇನ್ಸುಲಿನ್‌ಗೆ ದೇಹದ ಕೋಶಗಳು ಪ್ರತಿಕ್ರಿಯಿಸುವುದರ ಮೇಲೆ ಪರಿಣಾಮ ಬೀರುತ್ತಿದ್ದು, ಡಯಾಬಿಟಿಸ್ ಹೆಚ್ಚಲು ಕಾರಣವಾಗುತ್ತದೆ. ಮಹಿಳೆಯರಲ್ಲಿ ಇಂತಹ ಯಾವುದೇ ಲಕ್ಷಣ ಕಂಡುಬರುವುದಿಲ್ಲ ಎಂದು ಅಧ್ಯಯನದಿಂದ ತಿಳಿದುಬಂದಿದೆ. ಸರಾಸರಿಗಿಂತ ಹೆಚ್ಚು-ಕಡಿಮೆ ಅವಧಿ ನಿದ್ದೆ ಮಾಡುವವರಲ್ಲಿ ರಕ್ತದೊತ್ತಡ ಪ್ರಮಾಣ ಹೆಚ್ಚಿರುತ್ತದೆ. ಇನ್ನು ನಿಗದಿತ ಸಮಯಕ್ಕಿಂತ ಹೆಚ್ಚು ಅಥವಾ ಕಡಿಮೆ ಅವಧಿ ನಿದ್ದೆ ಮಾಡುವ ಮಹಿಳೆಯರಲ್ಲಿ ಇನ್ಸುಲಿನ್ ಹಾರ್ಮೋನ್ ಪ್ರತಿಕ್ರಿಯೆ ಹೆಚ್ಚು. ಏರಿಳಿತದಿಂದ ಡಯಾಬಿಟಿಸ್‌ಗೆ ಒಳಗಾಗುವವರ ಸಂಖ್ಯೆ ಕಡಿಮೆ. ಮನುಷ್ಯ ಆರೋಗ್ಯವಾಗಿದ್ದಾಗಲೂ ಹೆಚ್ಚು ಅಥವಾ ಕಡಿಮೆ ಅವಧಿ ನಿದ್ದೆ ಮಾಡುವುದು ಆರೋಗ್ಯಕ್ಕೆ ಹಾನಿಕರ ಎಂದು ಹೇಳುತ್ತಾರೆ.

ಹಾಗೂ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಿ, ಮನುಷ್ಯನಲ್ಲಿ ಜನ್ಮ ಜನ್ಮಾಂತರದಿಂದ ಬಂದಂತಹ ರೋಗಾದಿಗಳು ಖಂಡಿತವಾಗಿಯೂ ಹೋಗುತ್ತವೆಂಬುದನ್ನು ಶರಣರ ವಚನದಲ್ಲಿ ಹೇರಳವಾಗಿ ನಾವು ಕಾಣಬಹುದು.

ಸಾಧನೆಯಲ್ಲಿ ಕುಳಿತಾಗ ಹಿಂದೆ ಪಣತಿಯನ್ನಿಟ್ಟು ದೀಪವನ್ನು ಹಚ್ಚುವ ಕಾರಣವೇನೆಂದರೆ, ಆ ದೀಪವು ಉರಿಯುವಾಗ ಎಣ್ಣೆಯೊಳಗಿನ ಶಕ್ತಿಕಣಗಳು ಹೊರಬಿದ್ದು, ಲಿಂಗಕ್ಕೆ ಅಪ್ಪಳಿಸಿ ಅಲ್ಲಿಂದ ಋಣಾತ್ಮಕ ಕಣಗಳೇ ಹೊರಬೀಳುತ್ತವೆ. ಅವು ನಮ್ಮ ಮೆದುಳಿನಲ್ಲಿರುವಂತಹ ಶಕ್ತಿಯನ್ನು ಕಣ್ಣಿನ ಮುಖಾಂತರ ಕರಸ್ಥಲದ ಲಿಂಗಕ್ಕೆ ತಲುಪಿದಾಗ ನಮ್ಮ ಚೈತನ್ಯ ಬಿಡುಗಡೆಯಾದ ಋಣಾತ್ಮಕ ಶಕ್ತಿಕಣವನ್ನು ಕಣ್ಣಿನ ಮೂಲಕ ಜಗ್ಗಿ ಒಳ ಸೇರಿಸುತ್ತದೆ. ಆದ್ದರಿಂದ ಈ ಎಲ್ಲ ಕ್ರಿಯೆಗಳಿಗೆ ಕಣ್ಣೇ ದಾರಿಯೆಂದು ಶರಣರು ಸ್ಪಷ್ಟವಾಗಿ ಹೇಳುತ್ತಾರೆ. ಹಿಂದೆ ಇದ್ದ ಪಣತಿಯ ಬೆಳಕನ್ನು ಲಿಂಗದ ಮಧ್ಯಭಾಗದಲ್ಲಿ ಅರ್ಧ ತೆರೆದ ಕಣ್ಣಿನಿಂದ ನಾವು ನೋಡಬೇಕು. ಅಲ್ಲದೆ ಈ ದೇವನ ಕುರುಹು. ಆ ಕುರುಹಿನಲ್ಲಿ ಕಾಣುವ ಆ ಚಿಕ್ಕ ಜ್ಯೋತಿಯೇ ನನ್ನ ಆತ್ಮವೆಂದು ಆ ಆತ್ಮವೇ ನಾನು ಆತ್ಮವೇ ನಾನೆಂದ ಬಳಿಕ ಆ ಪರಮಾತ್ಮನಲ್ಲಿ ಒಂದಾಗಲೂ ಏಕಾಗ್ರತೆಯನ್ನು ಬಹಳ ಮುಖ್ಯವಾಗಿ ಕೇಂದ್ರೀಕರಿಸಬೇಕು.

ಸುಪ್ರಭಾತ ಸಮಯದಲ್ಲಿ ಪೂಜೆಗೆ ಕುಳಿತುಕೊಂಡಿರುವ ವ್ಯಕ್ತಿಯು ಸಕಾರಾತ್ಮಕ ಯೋಚನೆಗಳನ್ನು ಹೀಗೆ ಮಾಡಲು ತೊಡಗಬೇಕು: ನನ್ನ ಕಣ್ಣಿಗೆ ಲಿಂಗವು ಸುಂದರವಾಗಿ ಹೊಳೆಯುತ್ತಿದೆ, ನನ್ನ ಕೈಯಲ್ಲಿರುವ ಲಿಂಗದೊಳಗೆ ದೀಪದ ಕಿರಣಗಳು ಬಿದ್ದಿವೆ, ಇದನ್ನು ನಾನು ನೋಡುತ್ತಾ ಇದ್ದೀನಿ, ಅರೆ ತೆರೆದ ಕಣ್ಣಿನಿಂದ ಅನಿಮಿಷ ದೃಷ್ಟಿಯಿಂದ ಎವೆಯಿಕ್ಕದೆ ಈ ಲಿಂಗವನ್ನು ನೋಡುತ್ತಿದ್ದೇನೆ. ಈ ಕ್ಷಣದಿಂದಲೇ ನಾನು ಕರುಣಪ್ರಸಾದ ಪಡೆಯಲು ಅಣಿಯಾಗುತ್ತಿದ್ದೇನೆ ಎಂದು ಭಾವಿಸಿಕೊಳ್ಳಬೇಕು. ಈ ಸಮಯದಲ್ಲಿ

*** ಓದುಗರಿಗೆ ವಿಶೇಷ ಸೂಚನೆ ***

ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದಲ್ಲಿ ವಿಶೇಷ ಲೇಖನಗಳನ್ನು basavakumaraswamiji@gmail.com ಮೇಲ್ ಅಡ್ರೆಸ್‌ಗೆ ಲೇಖನಗಳನ್ನು ಕಳಿಸಬಹುದು.

ನಿಮ್ಮ ಕುಟುಂಬದಿಂದಲೂ ಶರಣರ ಹಬ್ಬಗಳಿಗೆ ಶುಭಾಶಯ ಕೋರಬಹುದು. ಕುಟುಂಬದ ಅಥವಾ ಒಬ್ಬರ ಫೋಟೋ ಕಳುಹಿಸಿದರೆ ನಿಮ್ಮ ಫೋಟೊವನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಶ್ರೀ ಬಸವಕುಮಾರ ಸ್ವಾಮೀಜಿ
ಮೊ.9449588669.

ನಭೋಮಂಡಲದಿಂದ ಅಂದರೆ 'ಹೆಲಿಯೊ ಪಾಸ್' ವಲಯದಿಂದ ಹೊರಹೊಮ್ಮಿದ ಕಣಗಳು ಲಿಂಗದಲ್ಲಿ ಪ್ರವೇಶ ಮಾಡಿ ಈ ಲಿಂಗದಿಂದ ನನ್ನ ದೇಹವನ್ನು ಪ್ರವೇಶ ಮಾಡುತ್ತಿವೆ ಎಂಬುದನ್ನು ಅರಿಯಬೇಕು. ಈ ಶಕ್ತಿಕಣಗಳ ಬಗ್ಗೆ ತೋಂಟದ ಸಿದ್ಧಲಿಂಗೇಶ್ವರರ ವಚನವನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬೇಕು.

ಅದ್ಭುತದಾಕಾಶದಲ್ಲಿ ಶುಭ್ರವರ್ಣದ ಅಂಗನೆ
ವಿದ್ಯುಲ್ಲತೆಯ ಹಡೆದಳು ನೋಡಾ!
ವಿದ್ಯುಲ್ಲತೆಯ ಬೆಳಗಿನಿಂದ ಶುದ್ಧ ಪ್ರಸಾದವ
ಕಂಡು ಶುದ್ಧಾಶುದ್ಧವನಳಿದು ನಾ ನೀನೆಂಬುದ
ಹೊದ್ದದೆ ಎರಡಳಿದ ನಿರಾಳ ನೀನೆ,
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.
(ಸವಸ)

ಈ ಮೇಲೆ ಸೂಚಿಸಿದ 'ಹೆಲಿಯೊ ಪಾಸ್' ವಲಯವೆಂದರೆ ಅದ್ಭುತದಾಕಾಶ. ಅಲ್ಲಿಯ ವಿದ್ಯುತ್ ಕಾಂತಿಯ ಕಣಗಳಿಗೆ ಶುಭ್ರವರ್ಣದ ಅಂಗನೆ ಎಂದು ಕರೆದಿದ್ದಾರೆ.

ಮುಂದುವರಿಯುವುದು...



ಸಮಸ್ಯೆ......? ಸಮಾಧಾನ.....!

ದಿಲೀಪ ಬತಮುರ್ಗೆ, ಬೀದರ.

ಲಿಂಗಾಯತ ಧರ್ಮೀಯರು ಯಾವುದನ್ನು ಯಾವುದನ್ನು ಪೂಜೆ ಮಾಡಬಾರದು, ಯೋಗ್ಯವಲ್ಲವೊ ಎಂಬುದನ್ನು ತಿಳಿಸಿ ಯಾವ ಪೂಜೆ ಮಾಡಬೇಕು ಯಾವುದು ಯೋಗ್ಯವೆಂಬುದನ್ನು ನಮಗೆ ಖಚಿತ ಪಡಿಸಿರಿ.

ಧರ್ಮಗುರು ಬಸವಣ್ಣನವರು ಆದೇಶಿಸಿದ್ದು ಗುರು-ಲಿಂಗ-ಜಂಗಮ ಪೂಜೆಯನ್ನು. ಅಷ್ಟಾವರಣದಲ್ಲಿ ಇವು ಮೂರು ಪೂಜ್ಯ ವಸ್ತುಗಳು. ಸಾಧನಗಳು ವಿಭೂತಿ ರುದ್ರಾಕ್ಷಿ ಮಂತ್ರ. ಈ ಸಾಧನಗಳಿಂದ ಪೂಜ್ಯ ವಸ್ತುಗಳನ್ನು ಪೂಜಿಸಿದಾಗ ಸಿಗುವ ಫಲಗಳೇ ಕರುಣೋದಕ, ಕರುಣಪ್ರಸಾದ. ಇದಕ್ಕೆ ಹೊರತಾಗಿ ಮನೆಯ ಜಗುಲಿಯ ಮೇಲೆ ಮಠದ ಗದ್ದುಗೆಯ ಮೇಲೆ ಗಣಪತಿ, ಸರಸ್ವತಿ, ಲಕ್ಷ್ಮೀ, ಬೇರೆ ಯಾವುದೇ ತರಹದ ಫೋಟೋಗಳು, ಪಂಚಲೋಹದ ಮೂರ್ತಿಗಳು, ಗುಂಡಕಲ್ಲು, ಲಿಂಬೆಹಣ್ಣು, ತಂಬಿಗೆಯ ಮೇಲೆ ತೆಂಗಿನಕಾಯಿ ಇನ್ನೂ ಏನೇನೋ ಇಟ್ಟು ಪೂಜಿಸುವುದುಂಟು. ಇವು ಪೂಜೆಗೆ ಅನರ್ಹವಾದವುಗಳು.

ಪೂಜೆಯ ಉದ್ದೇಶ ಆ ಸ್ವರೂಪ ನಾವಾಗುವುದು. ಗುರು ಪೂಜೆ ಅಂದರೆ ಧರ್ಮ ಗುರು ಬಸವಣ್ಣನವರ ಪೂಜೆ. ನಾವು ಪೂಜಿಸಿ ಗುರುವಾಗಬೇಕು. ಅಂದರೆ ಅರಿವೇ ಗುರುವಾಗಬೇಕು. ಲಿಂಗವ ಪೂಜಿಸಿ ಲಿಂಗವಾಗಬೇಕೆಂದರೆ ನಮ್ಮ ಆತ್ಮ ಲಿಂಗವಾಗಬೇಕು. ಜಂಗಮವ ಪೂಜಿಸಿ ನಾವೂ ಜಂಗಮವಾಗಬೇಕು. ಅಂದರೆ ಅನುಭಾವಿಗಳಾಗಬೇಕು. ಇದೊಂದು ಪರಿಶುದ್ಧ ಪರಿಕಲ್ಪನೆಯ ಆಚರಣೆ. ಇದನ್ನು ಬಿಟ್ಟು ಬೇರೆ ಬೇರೆ ಕಡೆಗೆ ಹೋಗಿ ಪೂಜಿಸಿದರೆ ನೋಡಿ ಶರಣರ ಉತ್ತರಾ?

"ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ ಒಟ್ಟೊಡವೆಯಾಗಿ ಬೀಳುವ ಲೊಟ್ಟೆ ಮೂಳರ ಕಂಡರೆ ಮೆಟ್ಟಿದ ಎಡ ಪಾದ ರಕ್ಷೆಯನು ತೆಗೆದು ಲಟನೆಲಟನೆ ಹೊಡೆಯೆಂದ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣ ಎಂದು ಅಂಬಿಗ ಕಾಯಕದ ಚೌಡಯ್ಯನವರು ನಿಷ್ಠುರವಾಗಿ ಎಚ್ಚರಿಸಿದ್ದಾರೆ. ಕ್ಷುದ್ರ ದೇವತೆಗಳ ಕಲ್ಪನೆಗಳನ್ನು ತೊಡೆದು ಹಾಕಿ ಏಕದೇವೋ ಪಾಸನೆಯನ್ನು ಪ್ರತಿಬಿಂಬಿಸಿ ಸಮಾಜ ಹಾಗೂ ರಾಷ್ಟ್ರದ ಸ್ವಾಸ್ಥ್ಯಕ್ಕಾಗಿ ಗುರು ಬಸವಣ್ಣನವರು......

"ದೇವನೊಬ್ಬ ನಾಮ ಹಲವು, ಪರಮ ಪತಿವ್ರತೆಗೆ ಗಂಡನೊಬ್ಬ ಅನ್ಯದೈವಕ್ಕೆಗಿದಡೆ ಕಿವಿ ಮೂಗ ಕೊಯ್ವ ನಮ್ಮ ಲಿಂಗದೇವ. ಅನ್ಯದೈವವೆಂಬುದು ಹಾದರ ಕಾಣಿರೋ ಅಂತಾ ಶರಣರು "ಹಾದರಗಿತ್ತಿ" ಭಕ್ತಿಯ ಬಗ್ಗೆ ಎಚ್ಚರವನ್ನು ಕೊಟ್ಟಿದ್ದಾರೆ.

"ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ ರಸವನು ಹಡೆಯಲುಬಾರದು, ಮಳಲ ಹೊಸೆದಡೆ ಹೊಸೆದಂತಲ್ಲದೆ, ಸರವಿಯ ಹಡೆಯಲುಬಾರದು, ನೀರ ಕಡೆದಡೆ ಕಡೆದಂತಲ್ಲದೆ, ಬೆಣ್ಣೆಯ ಹಡೆಯಲು ಬಾರದು ನಮ್ಮ ಲಿಂಗದೇವನಲ್ಲದೆ ಅನ್ಯದೈವಕ್ಕೆರಗಿದಡೆ ಜೊಳ್ಳುಕುಟ್ಟಿ ಕೈ ಹೊಟ್ಟಾದಂತೆ ಆಯಿತ್ತಯ್ಯಾ" ಎಂದು ಧರ್ಮಪಿತ ಬಸವಣ್ಣನವರು ನಿರ್ಣಯದ ಮಾತುಗಳನ್ನು ನಮಗರುಹಿದ್ದಾರೆ. ಇದಕ್ಕೆ ಲಿಂಗಾಚಾರವೆನ್ನುತ್ತಾರೆ.

ಮನೆಯ ಪರುಷಕಟ್ಟೆ (ಜಗುಲಿಯ ಮೇಲೆ) ಗುರು ಬಸವಣ್ಣನವರ ಮೂರ್ತಿ, ಭಾವ ಚಿತ್ರ ಮಾತ್ರ ಪೂಜೆಗೆ ಯೋಗ್ಯ ಹಾಗೂ ಇಷ್ಟಲಿಂಗ ಪೂಜೆ ಮಾಡಬೇಕು. ಸಮಯ ಒದಗಿ ಬಂದಾಗ ಜಂಗಮ ಪೂಜೆ ಕೈಕೊಳ್ಳಬೇಕು. ಇದು ಕಟ್ಟಪ್ಪಣೆ ಲಿಂಗಾಯತರಿಗೆ.

-ಪೂಜ್ಯಶ್ರೀ ಬಸವಕುಮಾರ ಸ್ವಾಮೀಜಿ

ಪುಟಾಣಿಗಳ ಪ್ರಪಂಚ

- ಶಿವಕುಮಾರ ಜೋಗಿಕಲ್‌ಮಠ



ಕಾಗಣ್ಣ ಮತ್ತು ಗುಬ್ಬಮ್ಮ

ಒಂದು ಮರದಲ್ಲಿ ಕಾಗಣ್ಣ, ಗುಬ್ಬಮ್ಮ ವಾಸವಾಗಿದ್ದರು. ಗುಬ್ಬಮ್ಮ ಸೌಮ್ಯ ಮತ್ತು ಉಪಕಾರಿ, ಅದರ ಮನೆ ಮೇಣದಿಂದ ತಯಾರಾಗಿತ್ತು. ಬಿಸಿಲಿಗೆ ಕರಗುವಂತಿದ್ದರೂ ಮಳೆಗಾಲದಲ್ಲಿ ಗಟ್ಟಿ. ಕಾಗಣ್ಣ ದುಷ್ಟಬುದ್ಧಿ, ಸೋಮಾರಿ. ಅದರ ಮನೆ ಸೆಗಣಿಯಿಂದ ತಯಾರಾಗಿತ್ತು. ಗುಬ್ಬಮ್ಮ ಎರಡು ಮೊಟ್ಟೆಗಳನ್ನಿಟ್ಟಿತ್ತು. ಅವಕ್ಕೆ ಕಾವು ಕೊಡುತ್ತಿತ್ತು.

ಮಳೆಗಾಲ ಶುರುವಾಯಿತು. ಒಂದು ದಿನ ರಾತ್ರಿ ವಿಪರೀತ ಧೋ ಧೋ ಮಳೆ ಬಿದ್ದು ಕಾಗಣ್ಣನ ಮನೆ ಕರಗಿ ಹೋಯಿತು. ಇದರಿಂದ ಮಳೆಯಲ್ಲಿ ತೋಯ್ದು ಚಳಿಯಿಂದ ಕಾಗಣ್ಣ ಗುಬ್ಬಕ್ಕಗೆ ನನ್ನ ಮನೆ ಬಿದ್ದು ಹೋಗಿ ನಾನು ಚಳಿಯಿಂದ ನಡುಗುತ್ತಿದ್ದೇನೆ . ರಾತ್ರಿ ಏನು ಮಾಡಲಿ ನೀನು ನನಗೆ ಕರುಣೆ ತೋರಿ ರಾತ್ರಿ ನಿನ್ನಲ್ಲಿ ಉಳಿಯಲು ಪರವಾನಗಿ ಕೊಡು.

ಗುಬ್ಬಮ್ಮ ಬಾಗಲು ತೆರೆದು ಕಾಗೆ ಪರಿಸ್ಥಿತಿ ಕಂಡು ಕನಿಕರ ಪಟ್ಟು ಬಾ ಕಾಗಣ್ಣ ಎಂದು ಒಳಗೆ ಕರೆದು ಅದಕ್ಕೆ ಸ್ವಲ್ಪ ತಿಂಡಿ ಕೊಟ್ಟು ಪಕ್ಕದ ಕೊಠಡಿಯಲ್ಲಿ ಮಲಗಲು ಜಾಗ ಕೊಟ್ಟಿತು. ರಾತ್ರಿ ಚೆಟ್ಟಾಗಿದ್ದರಿಂದ ಇಬ್ಬರು ಮಲಗಿದರು. ಒಂದು ಹೊತ್ತಿನಲ್ಲಿ ಅರೆ ಹೊಟ್ಟೆಯಿಂದ ಎಚ್ಚರವಾಯಿತು. ಅದರ ದುಷ್ಟ ಬುದ್ಧಿಯನ್ನು ಯೋಚಿಸಿತು. ಗುಬ್ಬಮ್ಮ ಮಲಗಿದ್ದಾಳೆ. ಮೆಲ್ಲಗೆ ಅದರ ಕೋಣೆಗೆ ಪ್ರವೇಶಿಸಿ ಅವಳ ಮೊಟ್ಟೆಗಳನ್ನು ಗುಳುಂ ಮಾಡಿ ಹೋಗಿ ಮಲಗಿಕೊಂಡಿತು.. ಬೆಳಿಗ್ಗೆ ಎಚ್ಚರವಾದಾಗ ಗುಬ್ಬಮ್ಮನಿಗೆ ಮೊಟ್ಟೆ ಗಯಾಬ್ ಆಗಿದ್ದ ಲಕ್ಷಣ ಕಂಡು ಬಂತು. ಮತ್ತು ಇದು ಕಾಗಣ್ಣನ ಕೆಲಸ ಎಂದು ತಿಳಿಯಿತು. ದುಃಖವಾದರೂ ಕಾಗಣ್ಣನಿಗೆ ತಕ್ಕ ಶಾಸ್ತಿ ಮಾಡಲು ನಿರ್ಧರಿಸಿತು.

ಕೂಡಲೇ ಕಾಗಣ್ಣನನ್ನು ಎಬ್ಬಿಸಿ ಹೇಳಿತು. ನಿನಗೆ ರಾತ್ರಿ ಅರೆ ಊಟವಾಯಿತು. ಈಗ ಬಿಸಿ ಊಟ ತಯಾರಾಗಿದೆ. ತಿಂದು ಹೋಗೆಂದು ಹೇಳಿತು. ಕಾಗಣ್ಣ ಎದ್ದಕೂಡಲೇ ಓಡಿಹೋಗಬೇಕೆಂದು ಯೋಚಿಸಿತು. ಆದರೆ ರಾತ್ರಿ ಘಟನೆ ಗುಬ್ಬಮ್ಮನಿಗೆ ತಿಳಿದಿಲ್ಲ ಸರಿ ಸಿಕ್ಕಾಗ ಏಕೆ ಬಿಡಬೇಕು ಬೆಳಗಿನ ಊಟ ಪುಕ್ಕಟೆ ಸಿಗುತ್ತದಲ್ಲ ಎಂದು ಊಟ ಮಾಡಲು ತಯಾರಾಯಿತು.

ಗುಬ್ಬಮ್ಮ ಊಟ ತಂದು ಕಾಗಣ್ಣನಿಗೆ ನಾನೇ ತಿನ್ನಿಸುತ್ತೇನೆ. ಅತಿಥಿ ಸತ್ಕಾರ ಆಗಲಿ ಎಂದಿತು. ಅತಿ ಬಿಸಿಯಾದ ಊಟ ಚಮಚದಿಂದ ಕಾಗಣ್ಣನ ಬಾಯಲ್ಲಿ ಹಾಕಿತು. ಇನ್ನು ಮಬ್ಬು ಕತ್ತಲೆಯಿಂದ ಕಾಗಣ್ಣನಿಗೆ ಈ ಬಿಸಿ ಊಟ ಕಾಣಿಸಲಿಲಲ. ಕಾದ ಚಮಚ ಊಟ ಬಾಯೊಳಗೆ ಬೀಳುತ್ತಿದ್ದಂತೆ ಕಾಗಣ್ಣನ ಬಾಯಿ ಸುಟ್ಟು ವಾಂತಿಯಾಯಿತು. ಬಿಸಿ ಊಟ ಹೊಟ್ಟೆ ಒಳಗೆ ಹೋಗುತ್ತಿದ್ದಂತೆ ಗುಬ್ಬಮ್ಮ ಮೊಟ್ಟೆಗಳು ಒಡೆದು ಮರಿಗಳಾಗಿ ಹೊರಬಂದವು. ಕಾಗಣ್ಣನ ಬಾಯಿ ಸುಟ್ಟಿದ್ದರಿಂದ ಅಯ್ಯೋ ಸತ್ತೆ ಸತ್ತೆ ಎಂದು ಬದರುತ್ತಾ ಓಡಿ ಹೋಯಿತು. ಅಂದಿನಿಂದ ದುಷ್ಟ ಬುದ್ಧಿ ತೋರಿಸದೆ ಬುದ್ಧಿ ಕಲಿಯಿತು. ಗುಬ್ಬಕ್ಕಿ ತನ್ನ ಮರಿಗಳಿಗೆ ಸ್ನಾನ ಮಾಡಿಸಿ ನಲಿಯಿತು.

ರಕ್ತ ಪರಿಚಲನೆ ಹೆಚ್ಚಿಸಲು ಅಧೋಮುಖ ವೃಕ್ಷಾಸನ

ಲೇಖನ : ಶಲಿಕರ್ ಪಾಟೀಲ್



ಯೋಗ ಮಾಡಿದರೆ ರೋಗಗಳಿಂದ ದೂರವಿರಬಹುದು ಎಂಬುದು ಯೋಗ ಮಾಡದವರಿಗೂ ತಿಳಿದಿರುವ ಸತ್ಯ. ನಮಗೆ ಇರುವ ಬಹುತೇಕ ಎಲ್ಲಾ ರೋಗಗಳನ್ನು ನಿವಾರಿಸುವ ಶಕ್ತಿಯನ್ನು ಯೋಗ ಪಡೆದಿದೆ. ಅಂದರೆ ಶೀತದಿಂದ ಹಿಡಿದು, ಅರ್ಥರಿಟಿಸ್‌ವರೆಗೂ, ಮಧುಮೇಹದಿಂದ ಹಿಡಿದು ನೋವು ನಿವಾರಣೆಯವರೆಗೂ, ಯೋಗವು ಒಂದು ದಿವ್ಯೌಷಧವೆಂಬಂತೆ ಬಳಕೆಯಾಗುತ್ತಿದೆ.


ನಮ್ಮ ಆರೋಗ್ಯ ಚೆನ್ನಾಗಿರಬೇಕು ಎಂದರೆ ದೇಹದ ಸಕಲ ಅಂಗಗಳು ಸರಿಯಾಗಿ ಕೆಲಸ ಮಾಡುತ್ತಿರಬೇಕು. ದೇಹದ ಎಲ್ಲಾ ಅಂಗಗಳು ಸರಿಯಾಗಿ ಕೆಲಸ ಮಾಡಬೇಕು ಎಂದರೆ, ಅವುಗಳಿಗೆ ಆಮ್ಲಜನಕ ಪೂರೈಕೆಯಾಗಬೇಕು. ಆಮ್ಲಜನಕ ಪೂರೈಕೆಯಾಗಬೇಕು ಎಂದರೆ ರಕ್ತ ಪರಿಚಲನೆ ಚೆನ್ನಾಗಿರಬೇಕು. ರಕ್ತ ಪರಿಚಲನೆ ಏರುಪೇರಾದರೆ, ರಕ್ತ ಹೆಪ್ಪುಗಟ್ಟುವಿಕೆ, ನರ-ಸಂಬಂಧಿ ಸಮಸ್ಯೆಗಳು, ಕಾಲು ಊದಿಕೊಳ್ಳುವಿಕೆ ಇತ್ಯಾದಿ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

ಸಮಯದವರೆಗೆ ಕಾಡುತ್ತಿದ್ದರೆ. ಒತ್ತಡ ಅಥವಾ ಗಾಯದಿಂದಾಗಿ ಬರುವ ತಾತ್ಕಾಲಿಕ ಮೂಳೆ ನೋವಿಗೆ ವಿವಿಧ ಬೇನೆಗಳಿವೆ.

ನಮ್ಮ ದೇಹದಲ್ಲಿ ರಕ್ತ ಪರಿಚಲನೆಯನ್ನು ಹೆಚ್ಚಿಸಲು ಹಲವಾರು ಚಿಕಿತ್ಸೆಗಳು ಲಭ್ಯವಿದೆ. ಆದರೂ ಎಲ್ಲಾ ಔಷಧಗಳ ಜೊತೆಗೆ ಯೋಗವನ್ನು ತಪ್ಪದೆ ಮಾಡಬೇಕಾಗುತ್ತದೆ. ಅದರಲ್ಲೂ ಅಧೋ ಮುಖ ವೃಕ್ಷಾಸನವನ್ನು ತಪ್ಪದೆ ಮಾಡಬೇಕಾಗುತ್ತದೆ. ಇದು ರಕ್ತ ಪರಿಚಲನೆಯನ್ನು ವರ್ಧಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದು ಪರಿಗಣಿಸಲ್ಪಟ್ಟಿದೆ. ಕಡಿಮೆ ರಕ್ತದೊತ್ತಡ ಸಮಸ್ಯೆ-ಮಾತ್ರೆ ಬಿಡಿ, ವೃಕ್ಷಾಸನ ಮಾಡಿ **"ಅಧೋ ಮುಖ ವೃಕ್ಷಾಸನ"** ಎಂಬ ಪದವು ಸಂಸ್ಕೃತದಿಂದ ಬಂದಿದೆ. ಇಲ್ಲಿ **"ಅಧೋ ಮುಖ"** ಎಂದರೆ ಕೆಳಮುಖ ಮತ್ತು ವೃಕ್ಷ ಎಂದರೆ ಮರ ಎಂದರ್ಥ. ಅಂದರೆ ಮರದ ರೀತಿಯ ಆಸನವನ್ನು ಕೆಳ ಮುಖವಾಗಿ ಮಾಡುವ ಭಂಗಿ.

ಈ ಆಸನ ಮಾಡುವಾಗ ಮುಖವು ಕೆಳಮುಖವಾಗಿರುತ್ತದೆ ಮತ್ತು ನಮ್ಮ ದೇಹವು ಮರದ ರೀತಿ ಕಾಣಿಸುತ್ತದೆ. ಆದ್ದರಿಂದ ಇದನ್ನು ಅಧೋಮುಖ ವೃಕ್ಷಾಸನ ಎನ್ನುತ್ತಾರೆ. ವೃಕ್ಷಾಸನವು ನಮ್ಮ ದೇಹಕ್ಕೆ ತಾಜಾ ರಕ್ತವನ್ನು ಒದಗಿಸುತ್ತದೆ. ಮೊದಮೊದಲು ಈ ಆಸನವನ್ನು ಅಭ್ಯಾಸ ಮಾಡಲು ಹೊಸಬರಿಗೆ ಕಷ್ಟವಾಗುತ್ತದೆ. ಹಾಗಾಗಿ ಇದನ್ನು ಗೋಡೆಯ ಸಹಾಯದೊಂದಿಗೆ ಮಾಡಬೇಕಾಗುತ್ತದೆ.

ಇದರಿಂದ ನೀವು ಬೀಳುವ ಸಾಧ್ಯತೆ ಸಹ ಕಡಿಮೆಯಾಗುತ್ತದೆ.



ರಕ್ತ ಪರಿಚಲನೆಗೆ ಸಾಲಂಭ ಭುಜಂಗಾಸನ

1. ನಿಮ್ಮ ಕೈಗಳನ್ನು ಗೋಡೆಯಿಂದ ಕೆಲವು ಇಂಚ ದೂರದಲ್ಲಿರಿಸಿ.
2. ನಿಮ್ಮ ಭುಜಗಳನ್ನು ಮಣಿಕಟ್ಟುಗಳ ನೇರಕ್ಕೆ ಇರಿಸಿ.
3. ಒಂದು ಮೊಣಕಾಲನ್ನು ಮಡಿಚಿ, ಇನ್ನೊಂದು ಕಾಲನ್ನು ಮೇಲಕ್ಕೆ ಎತ್ತಿ. ಒಮ್ಮೆ ನೀವು ಆರಾಮವಾಗಿದ್ದಿರಿ ಎನಿಸಿದರೆ, ಇನ್ನೊಂದು ಕಾಲನ್ನು ನೇರವಾಗಿ ಚಾಚಿ.
4. ಆಮೇಲೆ ಇನ್ನೊಂದು ಕಾಲನ್ನು ಚಾಚಿ.
5. ನಿಮ್ಮ ತಲೆಯು ಎರಡು ಕಾಲುಗಳ ನಡುವೆ ಇದೆಯೆಂದು ಖಚಿತಪಡಿಸಿಕೊಳ್ಳಿ.
6. ಇದೇ ಸ್ಥಿತಿಯಲ್ಲಿ ಒಂದು ನಿಮಿಷ ಅಥವಾ ಎರಡು ನಿಮಿಷಗಳ ಕಾಲ ಇರಿ. ಉಸಿರನ್ನು ದೀರ್ಘವಾಗಿ ತೆಗೆದುಕೊಳ್ಳಿ.
7. ಈಗ ನಿಮ್ಮ ಕಾಲುಗಳನ್ನು ನಿಧಾನವಾಗಿ ಕೆಳಗೆ ತನ್ನಿ.

ಲವಲವಿಕೆಯ ಜೀವನ ಶೈಲಿಗೆ ಹಾಲಾಸನ

ಈ ಆಸನವನ್ನು ಮಾಡಲು ಮೊದಲು ಕಷ್ಟವಾಗಬಹುದು. ಆದರೆ ಒಮ್ಮೆ ನೀವು ಇದನ್ನು ಮಾಡಲು ಆರಂಭಿಸಿದರೆ ಇದು ಮಾಡುವುದು ತುಂಬಾ ಸುಲಭವಾಗುತ್ತದೆ. ಆಸನದ ಇತರೆ ಪ್ರಯೋಜನಗಳು ಭುಜಗಳನ್ನು, ಕೈಗಳನ್ನು ಮತ್ತು ಮಣಿಕಟ್ಟುಗಳನ್ನು ಗಟ್ಟಿಗೊಳಿಸಲು ಸಹಾಯ ಮಾಡುತ್ತದೆ. ಒತ್ತಡ ಮತ್ತು ಆತಂಕಗಳನ್ನು ಕಡಿಮೆ ಮಾಡಿ ಮೆದುಳಿಗೆ ವಿಶ್ರಾಂತಿಯನ್ನು ನೀಡುತ್ತದೆ. ಹೊಟ್ಟೆಯ ಭಾಗವನ್ನು ಸ್ಟ್ರೆಚ್ ಮಾಡಲು ಇದು ಸಹಕರಿಸುತ್ತದೆ. ಸಾಧಾರಣ ಖಿನ್ನತೆಯನ್ನು ನಿವಾರಿಸುತ್ತದೆ. ಕತ್ತು, ಬೆನ್ನು ಅಥವಾ ಭುಜದ ಗಾಯಕ್ಕೆ ಒಳಗಾದವರು ಈ ಆಸನವನ್ನು ಮಾಡಬಾರದು.

ಹಾಸಿಗೆಯಿಂದ ಮೇಲೇಳುವವರಿಗೆ ಮಾಹಿತಿ

ಮಲಗಿದ ನಂತರ ಏಳುವವರು ಹಾಸಿಗೆಯಿಂದ ಒಮ್ಮೆಗೆ ಏಳಬಾರದು. 90 ಸೆಕೆಂಡ್ ತಡೆದು ಎದ್ದೇಳಬೇಕು. ಏಕೆಂದರೆ ಈ 90 ಸೆಂಕೆಡ್ ತಡೆದು ಏಳುವುದರಿಂದ ಆಕಸ್ಮಿಕ ಮರಣ ತಡೆಯಬಹುದು. ಏಕೆಂದರೆ ವ್ಯಕ್ತಿ ನಿದ್ದೆಯಲ್ಲಿ ಮಲಗಿದ ಭಂಗಿಯಿಂದ ತಕ್ಷಣ ಎದ್ದಾಗ ರಕ್ತ ಸಂಚಾರದಲ್ಲಿ ಏರುಪೇರಾಗಿ ಮೆದುಳಿಗೆ ರಕ್ತ ಸಂಚಾರ ನಿಂತು ಬಿಡುತ್ತದೆ. ಹೀಗಾಗುವುದರಿಂದ ತಕ್ಷಣ ಹೃದಯ ಸ್ತಂಭನವಾಗಿ ವ್ಯಕ್ತಿ ಸಾವನ್ನಪ್ಪುತ್ತಾನೆ. ಆದ್ದರಿಂದ ಹಾಸಿಗೆಯಿಂದ ಏಳುವಾಗ 90 ಸೆಕೆಂಡ್ ಕಾಲಾವಕಾಶ ತಡೆಯಲು ಈ ವಿಧಾನ ಅನುಸರಿಸಿ.

- ಎಚ್ಚರಗೊಂಡಾಗ ತಕ್ಷಣ ಎದ್ದೇಳದೆ 30 ಸೆಕೆಂಡ್ ಹಾಸಿಗೆಯಲ್ಲಿ ಕಣ್ಣು ತೆರೆದು ಮಲಗಿಕೊಂಡಿರಿ.
- ಮುಂದೆ 30 ಸೆಕೆಂಡ್ ಹಾಸಿಗೆಯಲ್ಲೆ ಎದ್ದು ಕುಳಿತುಕೊಳ್ಳಿ.
- ನಂತರದ 30 ಸೆಕೆಂಡ್ ಹಾಸಿಗೆ ಆಸರೆ ಹಿಡಿದು ನಿಂತುಕೊಂಡು ನಂತರ ಸಾಗಿ.

ಹೀಗೆ 90 ಸೆಕೆಂಡ್ ನಂತರ ಎದ್ದು ತಡೆದು ಹೋಗುವುದರಿಂದ ರಕ್ತ ಸಂಚಾರ ಸುಗಮವಾಗುತ್ತದೆ. ರಾತ್ರಿ ಮೂತ್ರ ವಿಸರ್ಜನೆಗೆ ಎದ್ದೇಳುವಾಗ ಕೂಡಾ ಈ ವಿಧಾನವನ್ನು ಚಾಚೂ ತಪ್ಪದೆ ಪಾಲಿಸಿ.



111 ಅಡಿ ಎತ್ತರದ ಬಸವ ಪುತ್ಥಳಿ

ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಆದ್ದರಿಂದ 111 ಅಡಿ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಗಿದೆ. ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಿಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ-ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು.

ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು- ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಗವಿಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ.

ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560 010. 9448137508, 9449588669

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666



ಲಿಂ. ಭಾಗ್ಯವತಿ ಬಸವರಾಜ್ ವಲ್ಲೆಪುರೆ

6-6-2016

ಲಿಂಗೈಕ್ಯ ಸಂಸ್ಮರಣೆ

ಇವರ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸುವವರು

ತಂದೆ – ಪಂಚಪ್ಪ ವರ್ಲೇಪುರೆ, ತಾಯಿ–ಚಂದ್ರಮ್ಮ,
ಪತಿ– ಬಸವರಾಜ್ ವರ್ಲೆಪುರೆ,
ಮಕ್ಕಳಾದ ಸಚ್ಚಿದಾನಂದ, ವಚನಶ್ರೀ

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666



ಲಿಂಗವೇ ದೇವರು
ಬಸವಣ್ಣನೇ ಗುರು

ಆಗಸ್ಟ್ 7


ಬಸವ ಪಂಚಮಿ

ಆಗಸ್ಟ್ 8

ನೀಲಾಂಬಿಕಾ ಷಷ್ಠಿ

ದಿನಕ್ಕೆ
ಶುಭ ಕೋರುವ

ಮಲ್ಲಿನಾಥ ಮಾಳಜಿ
(ಬಿಎಚ್‌ಇಎಲ್)
ನೀಲಮ್ಮ ಮಲ್ಲಿನಾಥ ಮಾಳಜಿ
ಕಲ್ಯಾಣಿ ಮಾಳಜಿ
ಬಸವಪ್ರಭು ಮಾಳಜಿ



Registered with Registrar oF News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post